**ಕರ್ನಾಟಕ ಸರ್ಕಾರ**
**(ವಿದ್ಯುತ್ ಪರಿವೀಕ್ಷಣಾಲಯ)**

ಮಾಹಿತಿ ಹಕ್ಕು 2005 ಸೆಕ್ಷನ್ 4 (1) (ಬಿ) ರ ಅನುಗುಣವಾಗಿ ಅಪರ ಮುಖ್ಯ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಉತ್ತರರವರ ಕಛೇರಿಯ ಮಾಹಿತಿ.

## I. <u>ವಿದ್ಯುತ್ ಪರಿವೀಕ್ಷಣಾಲಯ ಇಲಾಖೆಯ ರಚನೆ, ಕಾರ್ಯಗಳು ಮತ್ತು ಕರ್ತವ್ಯಗಳ ವಿವರ: –</u>

ವಿದ್ಯುತ್ ಪರಿವೀಕ್ಷಣಾಲಯವು ಕರ್ನಾಟಕ ಸರ್ಕಾರದ ಒಂದು ಇಲಾಖೆಯಾಗಿದ್ದು, ಇದು ಇಂಧನ ಇಲಾಖೆಯ ಅಡಿಯಲ್ಲಿ ಕಾರ್ಯನಿರ್ವಹಿಸುತ್ತದೆ. ವಿದ್ಯುತ್ ಪರಿವೀಕ್ಷಣಾಲಯದ ಕೇಂದ್ರ ಕಛೇರಿಯು ನಿರ್ಮಾಣ ಭವನ, 2ನೇ ಮಹಡಿ, ಡಾ|| ರಾಜ್‌ಕುಮಾರ್ ರಸ್ತೆ, ರಾಜಾಜಿನಗರ, ಬೆಂಗಳೂರು–560010 ವಿಳಾಸದ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿರುತ್ತದೆ. ಸರ್ಕಾರದ ಮುಖ್ಯ ವಿದ್ಯುತ್ ಪರಿವೀಕ್ಷಕರು, ವಿದ್ಯುತ್ ಪರಿವೀಕ್ಷಣಾಲಯದ ಇಲಾಖಾ ಮುಖ್ಯಸ್ಥರಾಗಿರುತ್ತಾರೆ. ಮುಖ್ಯ ವಿದ್ಯುತ್ ಪರಿವೀಕ್ಷಕರ ಅಧೀನದಲ್ಲಿ ಆರು ವಲಯಗಳು ಕಾರ್ಯನಿರ್ವಹಿಸುತ್ತಿದ್ದು ಅದರಲ್ಲಿ ಒಂದಾದ ಅಪರ ಮುಖ್ಯ ವಿದ್ಯುತ್ ಪರಿವೀಕ್ಷಕರು ಬೆಂಗಳೂರು ಉತ್ತರ ಕಚೇರಿಯು ಒಂದು ವಲಯ ಕಚೇರಿಯಾಗಿರುತ್ತದೆ. ಅಪರ ಮುಖ್ಯ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಉತ್ತರ ರವರು ಬೆಂಗಳೂರು ಉತ್ತರ ವಲಯದ ಮುಖ್ಯಸ್ಥರಾಗಿರುತ್ತಾರೆ. ಬೆಂಗಳೂರು ಉತ್ತರ ವಲಯದ ಕಛೇರಿಯು ನಂ: 2/3 & 2/4, ಅರಗಿಣಿ ಭವನ ಮೊದಲನೇ ಮಹಡಿ, ಡಾ. ರಾಜ್‌ಕುಮಾರ್ ರಸ್ತೆ,ರಾಜಾಜಿನಗರ, ಬೆಂಗಳೂರು–10 ಇಲ್ಲಿ ಕಾರ್ಯ ನಿರ್ವಹಿಸುತ್ತಿರುತ್ತದೆ ಸರ್ಕಾರದ ಆದೇಶ ಸಂ: EN 151 EBS 2012, DT: 21.06.2012ರ ಪ್ರಕಾರ ಕೋಲಾರ, ಚಿಕ್ಕಬಳ್ಳಾಪುರ ಚಿತ್ರದುರ್ಗ, ದಾವಣಗೆರೆ ಜಿಲ್ಲೆಗಳ ಜೊತೆಯಲ್ಲಿ  ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಗಳ ಅರ್ಧ ಭಾಗವು ಈ ವಲಯ ವ್ಯಾಪ್ತಿಯಲ್ಲಿ ಬರುತ್ತವೆ. ಈ ವಲಯ ವ್ಯಾಪ್ತಿಯಲ್ಲಿ ಐದು (5) ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರ ಕಛೇರಿಗಳು ಕಾರ್ಯನಿರ್ವಹಿಸುತ್ತಿದ್ದು ಅವುಗಳು ಯಾವುವೆಂದರೆ ಬೆಂಗಳೂರು ಉತ್ತರ, ಬೆಂಗಳೂರು ಹೆಚ್ಚುವರಿ ಉತ್ತರ, ಬೆಂಗಳೂರು ಪೂರ್ವ, ಬೆಂಗಳೂರು ಹೆಚ್ಚುವರಿ ಪೂರ್ವ ಮತ್ತು ಚಿತ್ರದುರ್ಗ.

**ಅ)<u>ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಉತ್ತರ</u>** ಸದರಿ ವೃತ್ತದ ಅಧಿಕಾರಿಯು ಮತ್ತು ಸಿಬ್ಬಂದಿಯವರು ಇದೇ ಕಛೇರಿಯಲ್ಲಿಯೇ ಕಾರ್ಯನಿರ್ವಹಿಸುತ್ತಿದ್ದು  ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಉತ್ತರ, ಉಪ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಉತ್ತರ, ಮೂವರು ಸಹಾಯಕ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಉತ್ತರ, ಉಪ ವಿದ್ಯುತ್ ಪರಿವೀಕ್ಷಕರು ಕೋಲಾರ, ಇಬ್ಬರು ಸಹಾಯಕ ವಿದ್ಯುತ್ ಪರಿವೀಕ್ಷಕರು, ಕೋಲಾರರವರುಗಳು ಕ್ಷೇತ್ರಿಯ ಅಧಿಕಾರಿಗಳಾಗಿದ್ದು  ಮತ್ತು ಸಹಾಯಕ ವಿದ್ಯುತ್ ಪರಿವೀಕ್ಷಕರು(ಕಛೇರಿ–2) ಬೆಂಗಳೂರು ಉತ್ತರರವರು ಕಛೇರಿ ಕೆಲಸ ನಿರ್ವಹಿಸುತ್ತಿದ್ದು  ಇವರೆಲ್ಲಾ ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಉತ್ತರರವರ ಅಧೀನದಲ್ಲಿ ಕೆಲಸ ನಿರ್ವಹಿಸುತ್ತಿರುತ್ತಾರೆ ಮತ್ತು  ಬೆಸ್ಕಾಂನ ಎನ್–4 & ಎನ್–5 ಉಪ ವಿಭಾಗ ಮತ್ತು  ಹೊಸಕೋಟೆ, ದೇವನಹಳ್ಳಿ ತಾಲ್ಲೂಕುಗಳು ಜೊತೆಯಲ್ಲಿ ಕೋಲಾರ ಜಿಲ್ಲೆಯು ಈ ಅಧಿಕಾರಿಯ  ವ್ಯಾಪ್ತಿಯಲ್ಲಿ ಬರುತ್ತವೆ.

1. **<u>ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಉತ್ತರ:</u>**ಸದರಿ ಅಧಿಕಾರಿಯುಇದೇ ಕಛೇರಿಯಲ್ಲಿಯೇ ಕಾರ್ಯನಿರ್ವಹಿಸುತ್ತಿದ್ದು ಉಪ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಉತ್ತರ, ಮೂವರು ಸಹಾಯಕ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಉತ್ತರ, ಉಪ ವಿದ್ಯುತ್ ಪರಿವೀಕ್ಷಕರು, ಕೋಲಾರ, ಇಬ್ಬರು ಸಹಾಯಕ ವಿದ್ಯುತ್ ಪರಿವೀಕ್ಷಕರು, ಕೋಲಾರರವರುಗಳು ಕ್ಷೇತ್ರಿಯ ಅಧಿಕಾರಿಗಳಾಗಿದ್ದು ಇವರೆಲ್ಲಾ ವಿದ್ಯುತ್ ಪರಿವೀಕ್ಷಕರು,

ಬೆಂಗಳೂರು ಉತ್ತರ ಅಧೀನದಲ್ಲಿ ಕೆಲಸ ನಿರ್ವಹಿಸುತ್ತಿರುತ್ತಾರೆ ಮತ್ತು ಬೆಸ್ಕಾಂನ ಎನ್–4 & ಎನ್–5 ಉಪ ವಿಭಾಗ ಮತ್ತು ಹೊಸಕೋಟೆ & ದೇವನಹಳ್ಳಿ ತಾಲ್ಲೂಕುಗಳು ಜೊತೆಯಲ್ಲಿ ಕೋಲಾರ ಜಿಲ್ಲೆಯು ಈ ಅಧಿಕಾರಿಯ ವ್ಯಾಪ್ತಿಯಲ್ಲಿ ಬರುತ್ತವೆ.

2. **ಉಪವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಉತ್ತರ:**ಸದರಿ ಅಧಿಕಾರಿಯುಇದೇ ಕಛೇರಿಯಲ್ಲಿಯೇ ಕಾರ್ಯನಿರ್ವಹಿಸುತ್ತಿದ್ದು ಮೂವರು ಸಹಾಯಕ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಉತ್ತರರವರುಗಳು ಕ್ಷೇತ್ರಿಯ ಅಧಿಕಾರಿಗಳಾಗಿದ್ದು ಇವರೆಲ್ಲಾ ಉಪ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಉತ್ತರ ಅಧೀನದಲ್ಲಿ ಕೆಲಸ ನಿರ್ವಹಿಸುತ್ತಿರುತ್ತಾರೆ ಮತ್ತು ಬೆಸ್ಕಾಂನ ಎನ್–4 & ಎನ್–5 ಉಪ ವಿಭಾಗ ಮತ್ತು ಹೊಸಕೋಟೆ, ದೇವನಹಳ್ಳಿ ತಾಲ್ಲೂಕುಗಳು ಈ ಅಧಿಕಾರಿಯ ವ್ಯಾಪ್ತಿಯಲ್ಲಿ ಬರುತ್ತವೆ.
3. **ಉಪ ವಿದ್ಯುತ್ ಪರಿವೀಕ್ಷಕರು, ಕೋಲಾರ:** ಈ ಕಛೇರಿಯು, ನಂ: 1086, ಹೊಸ ಬಡಾವಣೆ ಕೆನರಾ ಬ್ಯಾಂಕ್ ರಸ್ತೆ, ಕೋಲಾರ ಇಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಉಪ ವಿದ್ಯುತ್ ಪರಿವೀಕ್ಷಕರು, ಕೋಲಾರ ರವರು ಈ ಕಚೇರಿಯ ಮುಖ್ಯಸ್ಥರಾಗಿದ್ದು, ಇಬ್ಬರು ಸಹಾಯಕ ವಿದ್ಯುತ್ ಪರಿವೀಕ್ಷಕರು, ಇವರ ಅಧೀನದಲ್ಲಿ ಕೆಲಸ ನಿರ್ವಹಿಸುತ್ತಾರೆ.

ಆ) **ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಹೆಚ್ಚುವರಿ ಉತ್ತರ**: ಈ ಕಛೇರಿಯು ನಂ: 723, ಲಕ್ಷ್ಮಿನಾರಾಯಣ, ಎರಡನೇ ಮಹಡಿ, ಕದಂಬ ಹೊಟೇಲ್ ಎದುರು, ಮೋದಿ ಆಸ್ಪತ್ರೆ ರಸ್ತೆ, 2ನೇ ಹಂತ, ವೆಸ್ಟ್ ಆಫ್ ಕಾರ್ಡ್ ರಸ್ತೆ, ಬಸವೇಶ್ವರನಗರ, ಬೆಂಗಳೂರು–86 ಇಲ್ಲಿ ಕಾರ್ಯನಿರ್ವಹಿಸುತ್ತಿದ್ದು ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರುರವರು, ಈ ಕಛೇರಿಯ ಮುಖ್ಯಸ್ಥರಾಗಿದ್ದು, ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಹೆಚ್ಚುವರಿ ಉತ್ತರ, ಉಪ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಹೆಚ್ಚುವರಿ ಉತ್ತರ, ಮೂವರು ಸಹಾಯಕ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಹೆಚ್ಚುವರಿ ಉತ್ತರ, ಉಪ ವಿದ್ಯುತ್ ಪರಿವೀಕ್ಷಕರು, ಚಿಕ್ಕಬಳ್ಳಾಪುರ, ಒಬ್ಬ ಸಹಾಯಕ ವಿದ್ಯುತ್ ಪರಿವೀಕ್ಷಕರು, ಚಿಕ್ಕಬಳ್ಳಾಪುರರವರುಗಳು ಕ್ಷೇತ್ರಿಯ ಅಧಿಕಾರಿಗಳಾಗಿದ್ದು ಮತ್ತು ಸಹಾಯಕ ವಿದ್ಯುತ್ ಪರಿವೀಕ್ಷಕರು(ಕಛೇರಿ) ಬೆಂಗಳೂರು ಹೆಚ್ಚುವರಿ ಉತ್ತರರವರು ಕಛೇರಿ ಕೆಲಸ ನಿರ್ವಹಿಸುತ್ತಿದ್ದು ಇವರೆಲ್ಲಾ ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಹೆಚ್ಚುವರಿ ಉತ್ತರರವರ ಅಧೀನದಲ್ಲಿ ಕೆಲಸ ನಿರ್ವಹಿಸುತ್ತಿರುತ್ತಾರೆ ಮತ್ತು ಬೆಸ್ಕಾಂನ ಎನ್–1, ಎನ್2, ಎನ್3 ಮತ್ತು ಎನ್–7 ಉಪ ವಿಭಾಗಗಳು ಮತ್ತು ನೆಲಮಂಗಲ, ದೊಡ್ಡಬಳ್ಳಾಪುರ ತಾಲ್ಲೂಕುಗಳು ಜೊತೆಯಲ್ಲಿ ಚಿಕ್ಕಬಳ್ಳಾಪುರ ಜಿಲ್ಲೆಯು ಈ ಅಧಿಕಾರಿಯ ವ್ಯಾಪ್ತಿಯಲ್ಲಿ ಬರುತ್ತವೆ.

1. **ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಹೆಚ್ಚುವರಿ ಉತ್ತರ** ಈ ಅಧಿಕಾರಿಯು ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಹೆಚ್ಚುವರಿ ಉತ್ತರರವರ ಕಛೇರಿಯಲ್ಲಿ ಕೆಲಸ ನಿರ್ವಹಿಸುತ್ತಿದ್ದು ಉಪ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಹೆಚ್ಚುವರಿ ಉತ್ತರ, ಮೂವರು ಸಹಾಯಕ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಹೆಚ್ಚುವರಿ ಉತ್ತರ, ಉಪ ವಿದ್ಯುತ್ ಪರಿವೀಕ್ಷಕರು, ಚಿಕ್ಕಬಳ್ಳಾಪುರ, ಒಬ್ಬ ಸಹಾಯಕ ವಿದ್ಯುತ್ ಪರಿವೀಕ್ಷಕರು, ಚಿಕ್ಕಬಳ್ಳಾಪುರರವರುಗಳು ಕ್ಷೇತ್ರಿಯ ಅಧಿಕಾರಿಗಳಾಗಿದ್ದು ಇವರೆಲ್ಲಾ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಹೆಚ್ಚುವರಿ ಉತ್ತರರವರ ಅಧೀನದಲ್ಲಿ ಕೆಲಸ ನಿರ್ವಹಿಸುತ್ತಿರುತ್ತಾರೆ ಮತ್ತು ಬೆಸ್ಕಾಂನ ಎನ್–1, ಎನ್2, ಎನ್3, ಮತ್ತು ಎನ್–7 ಉಪ ವಿಭಾಗಗಳು ಮತ್ತು ನೆಲಮಂಗಲ, ದೊಡ್ಡಬಳ್ಳಾಪುರ ತಾಲ್ಲೂಕುಗಳು ಜೊತೆಯಲ್ಲಿ ಚಿಕ್ಕಬಳ್ಳಾಪುರ ಜಿಲ್ಲೆಯು ಈ ಅಧಿಕಾರಿಯ ವ್ಯಾಪ್ತಿಯಲ್ಲಿ ಬರುತ್ತವೆ.

2. **ಉಪವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಹೆಚ್ಚುವರಿ ಉತ್ತರ**: ಈ ಅಧಿಕಾರಿಯು ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಹೆಚ್ಚುವರಿ ಉತ್ತರರವರ ಕಛೇರಿಯಲ್ಲಿ ಕೆಲಸ ಕಾರ್ಯನಿರ್ವಹಿಸುತ್ತಿದ್ದು ಮೂವರು ಸಹಾಯಕ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಹೆಚ್ಚುವರಿ ಉತ್ತರರವರುಗಳು ಕ್ಷೇತ್ರಿಯ ಅಧಿಕಾರಿಗಳಾಗಿದ್ದು ಇವರೆಲ್ಲಾ ಉಪ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಹೆಚ್ಚುವರಿ ಉತ್ತರರವರ ಅಧೀನದಲ್ಲಿ ಕೆಲಸ

ನಿರ್ವಹಿಸುತ್ತಿರುತ್ತಾರೆ ಮತ್ತು ಬೆಸ್ಕಾಂನ ಎನ್–1, ಎನ್2, ಎನ್3, ಮತ್ತು ಎನ್–7 ಉಪ ವಿಭಾಗಗಳು ಮತ್ತು ನೆಲಮಂಗಲ, ದೊಡ್ಡಬಳ್ಳಾಪುರ ತಾಲ್ಲೂಕುಗಳು ಈ ಅಧಿಕಾರಿಯ ವ್ಯಾಪ್ತಿಯಲ್ಲಿ ಬರುತ್ತವೆ.

3. **ಉಪವಿದ್ಯುತ್ ಪರಿವೀಕ್ಷಕರು, ಚಿಕ್ಕಬಳ್ಳಾಪುರ** ಈ ಕಛೇರಿಯು ಸಿಟಿಜನ್ ಕ್ಲಬ್ ಎದುರು, ವಾಪಸಂದ್ರ, ಚಿಕ್ಕಬಳ್ಳಾಪುರ ಇಲ್ಲಿ ಕೆಲಸ ನಿರ್ವಹಿಸುತ್ತಿದ್ದು ಉಪ ವಿದ್ಯುತ್ ಪರಿವೀಕ್ಷಕರು, ಈ ಕಛೇರಿಯ ಮುಖ್ಯಸ್ಥರಾಗಿದ್ದು ಒಬ್ಬ ಸಹಾಯಕ ವಿದ್ಯುತ್ ಪರಿವೀಕ್ಷಕರು, ಚಿಕ್ಕಬಳ್ಳಾಪುರರವರು ಕ್ಷೇತ್ರಿಯ ಅಧಿಕಾರಿಯಾಗಿದ್ದು ಇವರು ಉಪ ವಿದ್ಯುತ್ ಪರಿವೀಕ್ಷಕರು, ಚಿಕ್ಕಬಳ್ಳಾಪುರರವರ ಅಧೀನದಲ್ಲಿ ಕೆಲಸ ನಿರ್ವಹಿಸುತ್ತಿರುತ್ತಾರೆ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಯು ಈ ಅಧಿಕಾರಿಯ ವ್ಯಾಪ್ತಿಯಲ್ಲಿ ಬರುತ್ತವೆ.

ಇ)**ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಪೂರ್ವ:** ಈ ಕಛೇರಿಯು ನಂ: 2/3 & 2/4, ಅರಗಿಣಿ ಭವನ ಮೊದಲನೇ ಮಹಡಿ, ಡಾ. ರಾಜ್‌ಕುಮಾರ್ ರಸ್ತೆ, ರಾಜಾಜಿನಗರ, ಬೆಂಗಳೂರು–10, ಇಲ್ಲಿ ಕಾರ್ಯನಿರ್ವಹಿಸುತ್ತಿದ್ದು ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಪೂರ್ವರವರು ಈ ಕಛೇರಿಯ ಮುಖ್ಯಸ್ಥರಾಗಿರುತ್ತಾರೆ, ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಪೂರ್ವ, ಉಪ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಪೂರ್ವ, ಮೂವರು ಸಹಾಯಕ ವಿದ್ಯುತ್ ಪರಿವೀಕ್ಷಕರು,ಬೆಂಗಳೂರು ಪೂರ್ವರವರುಗಳು ಕ್ಷೇತ್ರಿಯ ಅಧಿಕಾರಿಗಳಾಗಿದ್ದು ಮತ್ತು ಸಹಾಯಕ ವಿದ್ಯುತ್ ಪರಿವೀಕ್ಷಕರು(ಕಛೇರಿ) ಬೆಂಗಳೂರು ಪೂರ್ವರವರು ಕಛೇರಿ ಕೆಲಸ ನಿರ್ವಹಿಸುತ್ತಿದ್ದು ಇವರೆಲ್ಲಾ ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಪೂರ್ವರವರ ಅಧೀನದಲ್ಲಿ ಕೆಲಸ ನಿರ್ವಹಿಸುತ್ತಿರುತ್ತಾರೆ ಮತ್ತು ಬೆಸ್ಕಾಂನ ಇ–3, ಇ–4, ಇ–6,ಇ7,ಇ10, ಸಿ–1, ಸಿ–2, ಸಿ3, ಮತ್ತು ಸಿ–6, ಉಪ ವಿಭಾಗಗಳು ಈ ಅಧಿಕಾರಿಯ ವ್ಯಾಪ್ತಿಯಲ್ಲಿ ಬರುತ್ತವೆ.

1. **ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಪೂರ್ವ:** ಈ ಅಧಿಕಾರಿಯು ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಪೂರ್ವ ಕಛೇರಿಯಲ್ಲಿ ಕೆಲಸ ನಿರ್ವಹಿಸುತ್ತಿದ್ದು, ಉಪ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಪೂರ್ವ ಮತ್ತು ಮೂವರು ಸಹಾಯಕ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಪೂರ್ವರವರುಗಳು ಕ್ಷೇತ್ರಿಯ ಅಧಿಕಾರಿಗಳಾಗಿದ್ದು ಇವರೆಲ್ಲಾ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಪೂರ್ವರವರ ಅಧೀನದಲ್ಲಿ ಕೆಲಸ ನಿರ್ವಹಿಸುತ್ತಿರುತ್ತಾರೆ ಮತ್ತು ಬೆಸ್ಕಾಂನ ಇ–3, ಇ–4, ಇ–6, ಇ7, ಇ10, ಸಿ–1, ಸಿ–2, ಸಿ3, ಮತ್ತು ಸಿ–6, ಉಪ ವಿಭಾಗಗಳು ಈ ಅಧಿಕಾರಿಯ ವ್ಯಾಪ್ತಿಯಲ್ಲಿ ಬರುತ್ತವೆ.
2. **ಉಪ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಪೂರ್ವ:** ಈ ಅಧಿಕಾರಿಯು ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಪೂರ್ವ ಕಛೇರಿಯಲ್ಲಿ ಕೆಲಸ ನಿರ್ವಹಿಸುತ್ತಿದ್ದು, ಮೂವರು ಸಹಾಯಕ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಪೂರ್ವರವರುಗಳು ಕ್ಷೇತ್ರಿಯ ಅಧಿಕಾರಿಗಳಾಗಿದ್ದು ಇವರೆಲ್ಲಾ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಪೂರ್ವರವರ ಅಧೀನದಲ್ಲಿ ಕೆಲಸ ನಿರ್ವಹಿಸುತ್ತಿರುತ್ತಾರೆ ಮತ್ತು ಬೆಸ್ಕಾಂನ ಇ–3, ಇ–4, ಇ–6, ಇ7, ಇ10, ಸಿ–1, ಸಿ–2, ಸಿ3, ಮತ್ತು ಸಿ–6, ಉಪ ವಿಭಾಗಗಳು ಈ ಅಧಿಕಾರಿಯ ವ್ಯಾಪ್ತಿಯಲ್ಲಿ ಬರುತ್ತವೆ.

**ಈ) ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಹೆಚ್ಚುವರಿ ಪೂರ್ವ:** ಈ ಕಛೇರಿಯು ನಂ: 11, ಮತ್ತು 12/1, ಮೂರನೇ ಮಹಡಿ ಎ.ಕೆ. ಆಶ್ರಮ, ದೇವೇಗೌಡ್ ರಸ್ತೆ, ಆರ್.ಟಿ.ನಗರ, ಬೆಂಗಳೂರು, ಇಲ್ಲಿ ಕಾರ್ಯನಿರ್ವಹಿಸುತ್ತಿದ್ದು ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಹೆಚ್ಚುವರಿಪೂರ್ವರವರು ಈ ಕಛೇರಿಯ ಮುಖ್ಯಸ್ಥರಾಗಿರುತ್ತಾರೆ, ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಹೆಚ್ಚುವರಿ ಪೂರ್ವ, ಉಪ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಹೆಚ್ಚುವರಿ ಪೂರ್ವ, ಮೂವರು ಸಹಾಯಕ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಹೆಚ್ಚುವರಿ ಪೂರ್ವರವರುಗಳು ಕ್ಷೇತ್ರಿಯ ಅಧಿಕಾರಿಗಳಾಗಿದ್ದು ಮತ್ತು ಸಹಾಯಕ ವಿದ್ಯುತ್ ಪರಿವೀಕ್ಷಕರು (ಕಛೇರಿ) ಬೆಂಗಳೂರು ಹೆಚ್ಚುವರಿ ಪೂರ್ವರವರು ಕಛೇರಿ ಕೆಲಸ ನಿರ್ವಹಿಸುತ್ತಿದ್ದು ಇವರೆಲ್ಲಾ ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು

ಹೆಚ್ಚುವರಿ ಪೂರ್ವರವರ ಅಧೀನದಲ್ಲಿ ಕೆಲಸ ನಿರ್ವಹಿಸುತ್ತಿರುತ್ತಾರೆ ಮತ್ತು ಬೆಸ್ಕಾಂನ ಇ–1, ಇ–2, ಇ–5,ಇ–8,ಇ–9, ಸಿ–4, ಸಿ–7 & ಸಿ–8, ಉಪ ವಿಭಾಗಗಳು ಈ ಅಧಿಕಾರಿಯ ವ್ಯಾಪ್ತಿಯಲ್ಲಿ ಬರುತ್ತವೆ.

1. **ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಹೆಚ್ಚುವರಿ ಪೂರ್ವ:** ಈ ಅಧಿಕಾರಿಯು ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಹೆಚ್ಚುವರಿ ಪೂರ್ವ ಕಛೇರಿಯಲ್ಲಿ ಕೆಲಸ ನಿರ್ವಹಿಸುತ್ತಿದ್ದು, ಉಪ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಹೆಚ್ಚುವರಿ ಪೂರ್ವ ಮತ್ತು ಎರಡು ಸಹಾಯಕ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಹೆಚ್ಚುವರಿ ಪೂರ್ವರವರುಗಳು ಕ್ಷೇತ್ರಿಯ ಅಧಿಕಾರಿಗಳಾಗಿದ್ದು ಇವರೆಲ್ಲಾ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಪೂರ್ವರವರ ಅಧೀನದಲ್ಲಿ ಕೆಲಸ ನಿರ್ವಹಿಸುತ್ತಿರುತ್ತಾರೆ ಮತ್ತು ಬೆಸ್ಕಾಂನ ಇ–1, ಇ–2, ಇ–5,ಇ–8,ಇ–9, ಸಿ–4, ಸಿ–7 & ಸಿ–8 ಉಪ ವಿಭಾಗಗಳು ಈ ಅಧಿಕಾರಿಯ ವ್ಯಾಪ್ತಿಯಲ್ಲಿ ಬರುತ್ತವೆ.

2. **ಉಪ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಹೆಚ್ಚುವರಿ ಪೂರ್ವ:** ಈ ಅಧಿಕಾರಿಯು ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಹೆಚ್ಚುವರಿ ಪೂರ್ವ ಕಛೇರಿಯಲ್ಲಿ ಕೆಲಸ ನಿರ್ವಹಿಸುತ್ತಿದ್ದು, ಇಬ್ಬರು ಸಹಾಯಕ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಹೆಚ್ಚುವರಿ ಪೂರ್ವರವರುಗಳು ಕ್ಷೇತ್ರಿಯ ಅಧಿಕಾರಿಗಳಾಗಿದ್ದು ಇವರೆಲ್ಲಾ ಉಪ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಹೆಚ್ಚುವರಿ ಪೂರ್ವರವರ ಅಧೀನದಲ್ಲಿ ಕೆಲಸ ನಿರ್ವಹಿಸುತ್ತಿರುತ್ತಾರೆ ಮತ್ತು ಬೆಸ್ಕಾಂನ ಇ–1, ಇ–2, ಇ–5,ಇ–8,ಇ–9, ಸಿ–4, ಸಿ–7 & ಸಿ–8 ಉಪ ವಿಭಾಗಗಳು ಈ ಅಧಿಕಾರಿಯ ವ್ಯಾಪ್ತಿಯಲ್ಲಿ ಬರುತ್ತವೆ.

**ಉ) ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು, ಚಿತ್ರದುರ್ಗ:** ಈ ಕಛೇರಿಯು ನಂ: 45, 1ನೆ ಮಹಡಿ ಮಿತ್ರ ಬಡಾವಣೆ, ಮೆದೆಹಳ್ಳಿ ರಸ್ತೆ, ಅಯ್ಯಪ್ಪ ಟೆಂಪಲ್ ದೇವಸ್ಥಾನದ ಹತ್ತಿರ, ಚಿತ್ರದುರ್ಗ, ಇಲ್ಲಿ ಕಾರ್ಯನಿರ್ವಹಿಸುತ್ತಿದ್ದು ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು, ಚಿತ್ರದುರ್ಗರವರು ಈ ಕಛೇರಿಯ ಮುಖ್ಯಸ್ಥರಾಗಿರುತ್ತಾರೆ, ವಿದ್ಯುತ್ ಪರಿವೀಕ್ಷಕರು, ದಾವಣಗೆರೆ, ಉಪ ವಿದ್ಯುತ್ ಪರಿವೀಕ್ಷಕರು, ಚಿತ್ರದುರ್ಗ, ಉಪ ವಿದ್ಯುತ್ ಪರಿವೀಕ್ಷಕರು, ದಾವಣಗೆರೆ, ಇಬ್ಬರು ಸಹಾಯಕ ವಿದ್ಯುತ್ ಪರಿವೀಕ್ಷಕರು, ಚಿತ್ರದುರ್ಗ, ಒಬ್ಬ ಸಹಾಯಕ ವಿದ್ಯುತ್ ಪರಿವೀಕ್ಷಕರು, ದಾವಣಗೆರೆರವರುಗಳು ಕ್ಷೇತ್ರಿಯ ಅಧಿಕಾರಿಗಳಾಗಿದ್ದು ಮತ್ತು ಸಹಾಯಕ ವಿದ್ಯುತ್ ಪರಿವೀಕ್ಷಕರು, (ಕಛೇರಿ) ಚಿತ್ರದುರ್ಗರವರು ಕಛೇರಿ ಕೆಲಸ ನಿರ್ವಹಿಸುತ್ತಿದ್ದು ಇವರೆಲ್ಲಾ ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು, ಚಿತ್ರದುರ್ಗರವರ ಅಧೀನದಲ್ಲಿ ಕೆಲಸ ನಿರ್ವಹಿಸುತ್ತಿರುತ್ತಾರೆ ಮತ್ತು ಚಿತ್ರದುರ್ಗ ಮತ್ತು ದಾವಣಗೆರೆ ಜಿಲ್ಲೆಗಳು ಈ ಅಧಿಕಾರಿಯ ವ್ಯಾಪ್ತಿಯಲ್ಲಿ ಬರುತ್ತವೆ.

1. **ಉಪ ವಿದ್ಯುತ್ ಪರಿವೀಕ್ಷಕರು, ಚಿತ್ರದುರ್ಗ:** ಈ ಅಧಿಕಾರಿಯು ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು, ಚಿತ್ರದುರ್ಗರವರ ಕಛೇರಿಯಲ್ಲಿ ಕೆಲಸ ನಿರ್ವಹಿಸುತ್ತಿದ್ದು ಇಬ್ಬರು ಸಹಾಯಕ ವಿದ್ಯುತ್ ಪರಿವೀಕ್ಷಕರು, ಕ್ಷೇತ್ರಿಯ ಅಧಿಕಾರಿಗಳಾಗಿದ್ದು ಇವರೆಲ್ಲಾ ಉಪ ವಿದ್ಯುತ್ ಪರಿವೀಕ್ಷಕರು, ಚಿತ್ರದುರ್ಗರವರ ಅಧೀನದಲ್ಲಿ ಕೆಲಸ ನಿರ್ವಹಿಸುತ್ತಿರುತ್ತಾರೆ ಚಿತ್ರದುರ್ಗ ಜಿಲ್ಲೆಯು ಈ ಅಧಿಕಾರಿಯ ವ್ಯಾಪ್ತಿಯಲ್ಲಿ ಬರುತ್ತವೆ.

2. **ವಿದ್ಯುತ್ ಪರಿವೀಕ್ಷಕರು, ದಾವಣಗೆರೆ:** ಈ ಕಛೇರಿಯು ಬಕ್ಕೇಶ್ವರ ಮ್ಯಾನ್ಸನ್ ನಂ: 2257, 1ನೇ ಮಹಡಿ ಚರ್ಚ್ ರಸ್ತೆ, ಎಂ.ಸಿ.ಸಿ.ಎ.ಬ್ಲಾಕ್, ದಾವಣಗೆರೆ, ಇಲ್ಲಿ ಕೆಲಸ ನಿರ್ವಹಿಸುತ್ತಿದ್ದು ವಿದ್ಯುತ್ ಪರಿವೀಕ್ಷಕರು, ದಾವಣಗೆರೆರವರು ಈ ಕಛೇರಿಯ ಮುಖ್ಯಸ್ಥರಾಗಿರುತ್ತಾರೆ ಮತ್ತು ಉಪ ವಿದ್ಯುತ್ ಪರಿವೀಕ್ಷಕರು, ದಾವಣಗೆರೆ, ಮತ್ತು ಒಬ್ಬ ಸಹಾಯಕ ವಿದ್ಯುತ್ ಪರಿವೀಕ್ಷಕರು, ಕ್ಷೇತ್ರಿಯ ಅಧಿಕಾರಿಗಳಾಗಿದ್ದು ಮತ್ತು ಸಹಾಯಕ ವಿದ್ಯುತ್ ಪರಿವೀಕ್ಷಕರು, (ಕಛೇರಿ) ದಾವಣಗೆರೆರವರು ಕಛೇರಿ ಕೆಲಸ ನಿರ್ವಹಿಸುತ್ತಿದ್ದು ಇವರೆಲ್ಲಾ ವಿದ್ಯುತ್ ಪರಿವೀಕ್ಷಕರು, ದಾವಣಗೆರೆರವರ ಅಧೀನದಲ್ಲಿ ಕೆಲಸ ನಿರ್ವಹಿಸುತ್ತಿರುತ್ತಾರೆ ಚಿತ್ರದುರ್ಗ ಮತ್ತು ದಾವಣಗೆರೆ ಜಿಲ್ಲೆಗಳು ಈ ಅಧಿಕಾರಿಯ ವ್ಯಾಪ್ತಿಯಲ್ಲಿ ಬರುತ್ತವೆ.

3. **<u>ಉಪ ವಿದ್ಯುತ್ ಪರಿವೀಕ್ಷಕರು, ದಾವಣಗೆರೆ:</u>** ಈ ಅಧಿಕಾರಿಯು ವಿದ್ಯುತ್ ಪರಿವೀಕ್ಷಕರು, ದಾವಣಗೆರೆರವರ ಕಛೇರಿಯಲ್ಲಿ ಕೆಲಸ ನಿರ್ವಹಿಸುತ್ತಿದ್ದು ಒಬ್ಬ ಸಹಾಯಕ ವಿದ್ಯುತ್ ಪರಿವೀಕ್ಷಕರು, ಕ್ಷೇತ್ರಿಯ ಅಧಿಕಾರಿಯಾಗಿದ್ದು ಇವರು ಉಪ ವಿದ್ಯುತ್ ಪರಿವೀಕ್ಷಕರು, ದಾವಣಗೆರೆರವರ ಅಧೀನದಲ್ಲಿ ಕೆಲಸ ನಿರ್ವಹಿಸುತ್ತಿರುತ್ತಾರೆ ದಾವಣಗೆರೆ ಜಿಲ್ಲೆಯು ಈ ಅಧಿಕಾರಿಯ ವ್ಯಾಪ್ತಿಯಲ್ಲಿ ಬರುತ್ತವೆ.

ಈ ಮೇಲಿನ ತಾಂತ್ರಿಕ ಅಧಿಕಾರಿಗಳ ಜೊತೆ, ಸಹಾಯಕ ವಿದ್ಯುತ್ ಪರಿವೀಕ್ಷಕರು (ಕಛೇರಿ–1) ಬೆಂಗಳೂರು ಉತ್ತರರವರು, ಅಪರ ಮುಖ್ಯ ವಿದ್ಯುತ್ ಪರಿವೀಕ್ಷಕರು,ಬೆಂಗಳೂರು ಉತ್ತರರವರಿಗೆತಾಂತ್ರಿಕ ಕೆಲಸಗಳಿಗೆ ನೆರವಾಗುವರು.

ಆಡಳಿತ ಮತ್ತು ತೆರಿಗೆ ವಿಭಾಗಕ್ಕೆ ಸಂಬಂಧಪಟ್ಟಂತೆ ಒಬ್ಬರು ಲೆಕ್ಕಾಧಿಕಾರಿಗಳು, ಒಬ್ಬರು ವ್ಯವಸ್ಥಾಪಕರು, ಇಬ್ಬರು ಅಧೀಕ್ಷಕರುಗಳು, ಇಬ್ಬರು ಪ್ರಥಮ ದರ್ಜೆ ಸಹಾಯಕರು, ಒಬ್ಬರು ಶೀಘ್ರಲಿಪಿಗಾರರು, ಇಬ್ಬರು ದ್ವಿತೀಯ ದರ್ಜೆ ಸಹಾಯಕರುಗಳು ಈ ಅಧಿಕಾರಿಗಳು ಮತ್ತು ಸಿಬ್ಬಂದಿವರ್ಗದವರು,ಅಪರ ಮುಖ್ಯ ವಿದ್ಯುತ್ ಪರಿವೀಕ್ಷಕರು,ಬೆಂಗಳೂರು ಉತ್ತರರವರಿಗೆ ಆಡಳಿತ ಮತ್ತು ವಿದ್ಯುಚ್ಛಕ್ತಿ ತೆರಿಗೆ ವಿಭಾಗಕ್ಕೆ ಸಂಬಂಧಪಟ್ಟ ಕೆಲಸಗಳಿಗೆ ನೆರವಾಗುವರು.

**ಈ ಕಚೇರಿಯ ಮುಖ್ಯ ಉದ್ದೇಶವೇನೆಂದರೆ, ಈ ಕಚೇರಿಯ ಕಾರ್ಯವ್ಯಾಪ್ತಿಯಲ್ಲಿ ಈ ಕೆಳಗೆ ನಮೂದಿಸಿರುವ ಕಾಯ್ದೆ ಮತ್ತು ನಿಯಮಗಳನ್ನು ಪರಿಣಾಮಕಾರಿಯಾಗಿ ಜಾರಿಗೆ ತರುವುದು.**

1. ಬೆಂಗಳೂರು ಉತ್ತರ ವಲಯ ವ್ಯಾಪ್ತಿಯಲ್ಲಿ ಅಳವಡಿಸುವಂತಹ ಎಲ್ಲಾ ವಿದ್ಯುತ್ ಸ್ಥಾವರಗಳನ್ನು ವಿದ್ಯುತ್‌ಚ್ಛಕ್ತಿ ಕಾಯ್ದೆ 2003 ಮತ್ತು ಕೇಂದ್ರೀಯ ವಿದ್ಯುತ್‌ಚ್ಛಕ್ತಿ ಪ್ರಾಧಿಕಾರ (ಸುರಕ್ಷತಾ ಹಾಗೂ ವಿದ್ಯುತ್ ಪೂರೈಕೆಗೆ ಸಂಬಂಧಿಸಿದ) ನಿಬಂದನೆಗಳು 2010 ರ ಅನುಸಾರಪರಿಣಾಮಕಾರಿಯಾಗಿ ಜಾರಿಗೊಳಿಸುವುದು.
2. ಬೆಂಗಳೂರು ಉತ್ತರ ವಲಯ ವ್ಯಾಪ್ತಿಯಲ್ಲಿ ಅಳವಡಿಸುವಂತಹ ಲಿಫ್ಟ್/ಎಸ್ಕಲೇಟರ್‌ಗಳು/ಟ್ರಾವಲೇಟರ್ಸ್‌ಗಳನ್ನು ಕರ್ನಾಟಕ ಲಿಫ್ಟ್‌ಗಳ, ಎಸ್ಕಲೇಟರಗಳ ಮತ್ತು ಪ್ಯಾಸೆಂಜರ್ ಕನ್ವೇಯರಗಳ ಕಾಯಿದೆ 2012 ಮತ್ತು ನಿಯಮಗಳು 2015ರ ಅನುಸಾರ ಪರಿಣಾಮಕಾರಿಯಾಗಿ ಜಾರಿಗೊಳಿಸುವುದು
3. ಬೆಂಗಳೂರು ಉತ್ತರ ವಲಯ ವ್ಯಾಪ್ತಿಯಲ್ಲಿ ಅಳವಡಿಸುವಂತಹ ಎಲ್ಲಾ ಮಲ್ಟಿಪ್ಲೆಕ್ಸ್, ಶಾಶ್ವತ ಚಿತ್ರಮಂದಿರ/ ಅರೆಕಾಲಿಕ ಚಿತ್ರಮಂದಿರ/ ತಾತ್ಕಾಲಿಕ ಚಿತ್ರಮಂದಿರ ಮತ್ತು ಟೂರಿಂಗ್ ಟಾಕೀಸ್‌ಗಳಲ್ಲಿ ಅಳವಡಿಸಿರುವ ವಿದ್ಯುತ್ ಸ್ಥಾವರಗಳನ್ನು ಕರ್ನಾಟಕ ಸಿನಿಮಾ (ವಿನಿಯಮ) ಕಾಯ್ದೆ 1964 ಮತ್ತು ನಿಯಮಗಳು 2014ರ, ವಿದ್ಯುತ್‌ಚ್ಛಕ್ತಿ ಕಾಯ್ದೆ 2003 ಮತ್ತು ಕೇಂದ್ರೀಯ ವಿದ್ಯುತ್‌ಚ್ಛಕ್ತಿ ಪ್ರಾಧಿಕಾರ (ಸುರಕ್ಷತಾ ಹಾಗೂ ವಿದ್ಯುತ್ ಪೂರೈಕೆಗೆ ಸಂಬಂಧಿಸಿದ) ನಿಬಂದನೆಗಳು 2010 ರ ಅನುಸಾರ ಪರಿಣಾಮಕಾರಿಯಾಗಿ ಜಾರಿಗೊಳಿಸುವುದು.
4. ಬೆಂಗಳೂರು ಉತ್ತರ ವಲಯ ವ್ಯಾಪ್ತಿಯಲ್ಲಿ ಸಲ್ಲಿಸುವಂತಹ ಎಲ್ಲಾ ವಿದ್ಯುತ್ ಗುತ್ತಿಗೆದಾರರ/ ಪರವಾನಗಿಗಳನ್ನು ಕರ್ನಾಟಕ( ವಿದ್ಯುತ್ ಗುತ್ತಿಗೆದಾರರ ಪರವಾನಗಿ ಮತ್ತು ವಿಷೇಶ ತಂತಿ ಕೆಲಸಗಾರರ ರಹದಾರಿ ವಿದ್ಯುತ್ ಮೇಲ್ವಿಚಾರಕರ ಮತು ಕೆಲಸಗಾರರ ಸಕ್ಷಮ ಪ್ರಮಾಣ ಪತ್ರ ಮತ್ತು ರಹದಾರಿ ನೀಡಿಕೆ) ನಿಯಮಗಳು–2012ರ ಅನುಸಾರ ಪರಿಣಾಮಕಾರಿಯಾಗಿ ಜಾರಿಗೊಳಿಸುವುದು
5. ಬೆಂಗಳೂರು ಉತ್ತರ ವಲಯ ವ್ಯಾಪ್ತಿಯಲ್ಲಿಕರ್ನಾಟಕ ವಿದ್ಯುಚ್ಛಕ್ತಿ (ಸ್ವಂತ ಬಳಕೆ ಮತ್ತು ಮಾರಾಟ ಮೇಲಿನ ತೆರಿಗೆ) ಕಾಯ್ದೆ 1959 ಮತ್ತು ನಿಯಮಗಳೂ 2014 ರ ಪ್ರಕಾರ ಗ್ರಾಹಕರ ವಿದ್ಯುತ್ ಜನಕದಿಂದ ಉತ್ಪಾಧಿಸಿದ ವಿದ್ಯುಚ್ಛಕ್ತಿ ಮೇಲಿನ ತೆರಿಗೆ ವಸೂಲಾತಿಗೆ ಪರಿಣಾಮಕಾರಿಯಾಗಿ ಕ್ರಮ ಜಾರಿಗೊಳಿಸುವುದು

**ಈ ಮೇಲಿನವುಗಳನ್ನು ಪರಿಣಾಮಕಾರಿಯಾಗಿ ಜಾರಿಗೆ ತರಲು ಈ ಕಛೇರಿಯು ಈ ಕೆಳಗಿನಂತೆ ಕಾರ್ಯ ನಿರ್ವಹಿಸುತ್ತದೆ.**

1. ಸರ್ಕಾರವು ಹೊರಡಿಸಿರುವ ಅಧಿಕಾರ ಪ್ರತ್ಯಾಯೋಜನೆ ಪ್ರಕಾರ ವಿದ್ಯುತ್ ಗ್ರಾಹಕರ ಮತ್ತು ಸರಬರಾಜು ದಾರರಿಗೆ ಸಂಬಂಭಪಟ್ಟ ಹೆಚ್.ಟಿ./ಡಿ.ಜಿ/ಸಿ.ಜಿ., 15 ಮೀ. ಗಿಂತ ಹೆಚ್ಚು ಮತ್ತು 24 ಮೀ. ಗಿಂತ ಕಡಿಮೆ ಇರುವ ಬಹುಮಹಡಿ ಕಟ್ಟಡ, ಸಿನಿಮಾ, ಲಿಫ್ಟ್, ಎಸ್ಕಲೇಟರ್ ಮತ್ತು ಪ್ಯಾಸೆಂಜರ್ ಕನ್ವೇಯರಗಳು, ಎಕ್ಸ್–ರೆ, ನಿಯಾನ್ ಸೈನ್ ಮತ್ತು ಇತರೆ ವಿದ್ಯುತ್ ಸ್ಥಾವರಗಳಿಗೆ ಸಂಬಂಧಪಟ್ಟ ಸ್ಥಾವರಗಳ ನೀಲಿ ನಕ್ಷೆ ಅನುಮೋದಿಸಿವುದು.
2. ಸರ್ಕಾರವು ಹೊರಡಿಸಿರುವ ಅಧಿಕಾರ ಪ್ರತ್ಯಾಯೋಜನೆ ಪ್ರಕಾರ ತಮ್ಮ ಅಧಿಕಾರ ವ್ಯಾಪ್ತಿಯಲ್ಲಿ ಬರುವ ವಿದ್ಯುತ್ ಸ್ಥಾವರಗಳ ಪರಿವೀಕ್ಷಣೆ ಮಾಡಿಸ್ಥಾವರಗಳು ಸುರಕ್ಷಿತವಾಗಿದೆ ಎಂಬುದು ಧೃಢಪಟ್ಟ ನಂತರ ಚಾಲನಾ ಅನುಮತಿಯನ್ನು ನೀಡುವುದು.
3. ಸರ್ಕಾರವು ಹೊರಡಿಸಿರುವ ಅಧಿಕಾರ ಪ್ರತ್ಯಾಯೋಜನೆ ಪ್ರಕಾರ ಎಲ್ಲಾ ವಿದ್ಯುತ್ ಸ್ಥಾವರಗಳನ್ನು ನಿಯತಕಾಲಿಕ ಪರಿವೀಕ್ಷಣೆ ನಡೆಸುವುದು.
4. ಈ ವಲಯದ ಕಾರ್ಯ ವ್ಯಾಪ್ತಿಯಲ್ಲಿ ಸಂಭವಿಸುವಂತಹ ವಿದ್ಯುತ್ ಅಪಘಾತಗಳು, ವಿದ್ಯುತ್‌ನಿಂದ ಸಂಭವಿಸಿದ ಬೆಂಕಿ ಅಪಘಾತಗಳು ಮತ್ತು ಲಿಫ್ಟ್, ಎಸ್ಕಲೇಟರ್ ಮತ್ತು ಪ್ಯಾಸೆಂಜರ್ ಕನ್ವೇಯರಗಳಲ್ಲಿ ಸಂಭವಿಸುವಂತಹ ಅಪಘಾತಗಳನ್ನು ಸರ್ಕಾರವು ಹೊರಡಿಸಿರುವ ಅಧಿಕಾರ ಪ್ರತ್ಯಾಯೋಜನೆ ಪ್ರಕಾರ ತನಿಖೆ ಮಾಡಿ ತನಿಖಾ ವರದಿಯನ್ನು ಸರ್ಕಾರಕ್ಕೆ ಸಲ್ಲಿಸುವುದು ಮತ್ತು ಅಂತಹ ಅಪಘಾತಗಳು ಮರುಕಳಿಸದಂತೆ ತಡೆಗಟ್ಟಲುವಿದ್ಯುತ್ ಸರಬರಾಜುದಾರರಿಗೆ ಮತ್ತುವಿದ್ಯುತ್ ಗ್ರಾಹಕರುಗಳಿಗೆ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳಲು ಸೂಚಿಸುವುದು.
5. ಸರ್ಕಾರದ ಆದೇಶದನ್ವಯ ಈ ಕಚೇರಿಯ ಕಾರ್ಯವ್ಯಾಪ್ತಿಯಲ್ಲಿ ಬರುವಂತಹ ಕೆ.ಪಿ.ಸಿ.ಎಲ್/ಬೆಸ್ಕಾಂ/ಐಪಿಪಿ ಮತ್ತು ವಿದ್ಯುತ್ ಗ್ರಾಹಕರುಗಳಿಂದಕರ್ನಾಟಕ ವಿದ್ಯುಚ್ಛಕ್ತಿ (ಸ್ವಂತ ಬಳಕೆ ಮತ್ತು ಮಾರಾಟ ಮೇಲಿನ ತೆರಿಗೆ) ಕಾಯ್ದೆ 1959 ಮತ್ತು ನಿಯಮಗಳು1959ರ ಪ್ರಕಾರ ವಿದ್ಯುತ್ ತೆರಿಗೆಯಲ್ಲಿ ಬರುವಂತಹ ರಾಜಸ್ವವನ್ನು ಸರ್ಕಾರದ ಖಜಾನೆಗೆ ಸಂದಾಯ ಮಾಡುವುದರ ಬಗ್ಗೆ ಮೇಲ್ವಿಚಾರಣೆ ಮಾಡುವುದು.

6. ಈ ಇಲಾಖೆಯು ಕರ್ನಾಟಕ( ವಿದ್ಯುತ್ ಗುತ್ತಿಗೆದಾರರ ಪರವಾನಗಿ ಮತ್ತು ವಿಷೇಶ ತಂತಿ ಕೆಲಸಗಾರರ ರಹದಾರಿ ವಿದ್ಯುತ್ ಮೇಲ್ವಿಚಾರಕರ ಮತು ಕೆಲಸಗಾರರ ಸಕ್ಷಮ ಪ್ರಮಾಣ ಪತ್ರ ಮತ್ತು ರಹದಾರಿ ನೀಡಿಕೆ) ನಿಯಮಗಳು–2012ರಅನುಸಾರಉಪ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಉತ್ತರ ರವರ ಕಾರ್ಯ ವ್ಯಾಪ್ತಿಗೆ ಸಂಬಂಧಪಟ್ಟ ಅರ್ಜಿಗಳನ್ನು ಅವರ ಹಂತದಲ್ಲೆ ಸ್ವೀಕರಿಸಿ, ಸರ್ಕಾರದ ಮುಖ್ಯ ವಿದ್ಯುತ್ ಪರಿವೀಕ್ಷಕರು, ಬೆಂಗಳೂರುರವರಿಗೆ ಸಲ್ಲಿಸಲಾಗುವುದು ಹಾಗೂ ಉಪ ವಿದ್ಯುತ್ ಪರಿವೀಕ್ಷಕರುಗಳ ಹಂತದಲ್ಲಿ ಮೇಲ್ವಿಚಾರಕರ ಮತ್ತು ತಂತಿ ರಹದಾರಿಗಳನ್ನು ವಿದ್ಯುತ್ ಗುತ್ತಿಗೆದಾರರ ಪರವಾನಗೆಗಳಿಗೆ ಹಿಂಬರಹಗೊಳಿಸಲಾಗುವುದು ಹಾಗೂ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಉತ್ತರರವರ ಕಾರ್ಯ ವ್ಯಾಪ್ತಿಗೆ ಸಂಬಂಧಪಟ್ಟ ಸಿನೆಮಾ ಆಪರೇಟರ್‌ಗಳ ಪರವಾನಗಿಗಳ ಅರ್ಜಿಗಳನ್ನು ಅವರ ಹಂತದಲ್ಲೇ ಸ್ವೀಕರಿಸಿ, ಗತಿಸಿದ ಪರವಾನಗಿಗಳನ್ನು ಮುಖ್ಯ ವಿದ್ಯುತ್ ಪರಿವಿಕ್ಷಕರ ಕಛೇರಿಯಲ್ಲಿ ಮಾನ್ಯತೆಗಳಿಗಾಗಿ ಸಲ್ಲಿಸುವುದು
7. ವಿದ್ಯುತ್ ಗುತ್ತಿಗೆದಾರರ/ಮೇಲ್ಚಿಚಾರಕ/ತಂತಿ ಕೆಲಸಗಾರರ/ಮೈನಿಂಗ್/ಕೈಗಾರಿಕಾ ಮೇಲ್ವಿಚಾರಕರ ಪರೀಕ್ಷೆಯ ಅರ್ಜಿಗಳನ್ನು ಪರಿಶೀಲಿಸುವುದು.
8. 100 ಜನರಿಗಿಂತಲೂ ಹೆಚ್ಚಿನ ಜನಸಂದಣಿ ಇರುವಂತಹ ಸಮಾರಂಭಗಳಲ್ಲಿ ಅಳವಡಿಸಿರುವ ತಾತ್ಕಾಲಿಕ ವಿದ್ಯುತ್ ಸ್ಥಾವರಗಳ ಪರಿವೀಕ್ಷಣೆ ಮತ್ತು ಅನುಮೋದನೆ.

## II. <u>ಅಪರ ಮುಖ್ಯ ವಿದ್ಯುತ್ ಪರಿವೀಕ್ಷಕರ ಕಚೇರಿ, ಬೆಂಗಳೂರು ಉತ್ತರ ವಲಯ ಕಛೇರಿಯ ಅಧಿಕಾರಿಗಳ ಮತ್ತು ನೌಕರರ ಕರ್ತವ್ಯಗಳು:–</u>

**<u>ತಾಂತ್ರಿಕ ವಿಭಾಗ</u>**

### 1. <u>ಅಪರ ಮುಖ್ಯ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಉತ್ತರ ವಲಯ:</u>

ಅಪರ ಮುಖ್ಯ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಉತ್ತರರವರು, ಕಛೇರಿಯ ಮುಖ್ಯಸ್ಥರಾಗಿದ್ದು ಮತ್ತು ಬಟವಾಡೆ ಅಧಿಕಾರಿಯಾಗಿರುತ್ತಾರೆ. ಈ ಕಛೇರಿಯಲ್ಲಿ ಕೆಲಸ ನಿರ್ವಹಿಸುವ ಅಧಿಕಾರಿ/ ಸಿಬ್ಬಂದಿಗಳಿಗೆ ಆಡಳಿತಾಧಿಕಾರಿಯಾಗಿರುತ್ತಾರೆ. ಇವರು ಸರ್ಕಾರದ ಅಧಿಕಾರ ಪ್ರತ್ಯಾಯೋಜನೆ ಪ್ರಕಾರ ಹಾಗೂ ಸರ್ಕಾರದ ಕಾಯ್ದೆ ಮತ್ತು ನಿಯಮಗಳನುಸಾರ ನೀಲಿನಕ್ಷೆ ಮತ್ತು ಚಾಲನಾ ಅನುಮೋದನೆಯನ್ನು ನೀಡುವುದು, ವಿದ್ಯುತ್ ಅಪಘಾತಗಳ ಮತ್ತು ಲಿಫ್ಟ್, ಎಸ್ಕಲೇಟರ್ ಮತ್ತು ಪ್ಯಾಸೆಂಜರ್ ಕನ್ವೇಯರಗಳಲ್ಲಿ ಸಂಭವಿಸುವ ಅಪಘಾತಗಳ ತನಿಖಾವರದಿಯನ್ನು ಸರ್ಕಾರಕ್ಕೆ ಸಲ್ಲಿಸುವುದು,ವಿದ್ಯುತ್ ಸ್ಥಾವರಗಳ ನಿಯಾತಕಾಲಿಕ ಪರಿವೀಕ್ಷಣೆಯನ್ನು ಕೈಗೊಳ್ಳುವುದು,ವಲಯದ ಕ್ರೋಢೀಕೃತ ಪ್ರಗತಿ ವರದಿಗಳು, ಖರ್ಚು ವೆಚ್ಚಗಳ ವರದಿ, ಚಲನ್ ರಿಕನ್ಸಿಲಿಯೇಷನ್‌ಗಳ ಕ್ರೋಢೀಕೃತ ವರದಿಗಳನ್ನು ಮುಖ್ಯ ವಿದ್ಯುತ್ ಪರಿವೀಕ್ಷಕರು, ಬೆಂಗಳೂರುರವರಿಗೆ ಸಲ್ಲಿಸುವುದು ಮತ್ತು ಮೇಲೆ ನಮೂದಿಸಿದ ಕಾರ್ಯಗಳಲ್ಲದೆ ಮೇಲಾಧಿಕಾರಿಗಳು ಸೂಚಿಸುವ ಇತರೆ ಕಚೇರಿಯಕಾರ್ಯಗಳನ್ನು ನಿರ್ವಹಿಸುವುದು ಮತ್ತು ಅಧೀನ ಕಛೇರಿ ವ್ಯಾಪ್ತಿಗೆ ಬರುವಂತಹ ಎಲ್ಲಾ ಕಾರ್ಯಗಳು ಸಮಯಕ್ಕೆ ಸರಿಯಾಗಿ, ಸಮರ್ಪಕವಾಗಿ ನಡೆಯುವ ಕುರಿತು ನಿಗಾವಹಿಸುವುದು.

### 2. <u>ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಉತ್ತರ ವಲಯ:</u>

ಸದರಿ ಅಧಿಕಾರಿಯು ಸರ್ಕಾರದ ಅಧಿಕಾರ ಪ್ರತ್ಯಾಯೋಜನೆ ಪ್ರಕಾರ ಹಾಗೂ ಸರ್ಕಾರದ ಕಾಯ್ದೆ ಮತ್ತು ನಿಯಮಗಳನುಸಾರ ನೀಲಿನಕ್ಷೆ ಮತ್ತು ಚಾಲನಾ ಅನುಮೋದನೆಯನ್ನು ನೀಡುವುದು, ವಿದ್ಯುತ್ ಅಪಘಾತಗಳ ಮತ್ತು ವಿದ್ಯುತ್‌ನಿಂದ ಸಂಭವಿಸುವ ಬೆಂಕಿ ಅಪಘಾತಗಳ ತನಿಖಾವರದಿಯನ್ನು ಸಲ್ಲಿಸುವುದು,ವಿದ್ಯುತ್ ಸ್ಥಾವರಗಳ ನಿಯಾತಕಾಲಿಕ ಪರಿವೀಕ್ಷಣೆಯನ್ನು ಕೈಗೊಳ್ಳುವುದು,ವೃತ್ತದ ಕ್ರೋಢೀಕೃತ ಪ್ರಗತಿ ವರದಿಗಳು, ಖರ್ಚು ವೆಚ್ಚಗಳ ವರದಿ, ಚಲನ್ ರಿಕನ್ಸಿಲಿಯೇಷನ್‌ಗಳ ಕ್ರೋಢೀಕೃತ ವರದಿಗಳನ್ನು ಅಪರ ಮುಖ್ಯ ವಿದ್ಯುತ್ ಪರಿವೀಕ್ಷಕರು, ಬೆಂಗಳೂರುರವರಿಗೆ ಸಲ್ಲಿಸುವುದು ಮತ್ತು ಮೇಲೆ ನಮೂದಿಸಿದ ಕಾರ್ಯಗಳಲ್ಲದೆ ಮೇಲಾಧಿಕಾರಿಗಳು ಸೂಚಿಸುವ ಇತರೆ ಕಚೇರಿಯ ಕಾರ್ಯಗಳನ್ನು ನಿರ್ವಹಿಸುವುದು ಮತ್ತು ಅಧೀನ ಕಛೇರಿ ವ್ಯಾಪ್ತಿಗೆ ಬರುವಂತಹ ಎಲ್ಲಾ ಕಾರ್ಯಗಳು ಸಮಯಕ್ಕೆ ಸರಿಯಾಗಿ, ಸಮರ್ಪಕವಾಗಿ ನಡೆಯುವ ಕುರಿತು ನಿಗಾವಹಿಸುವುದು.

### 3. <u>ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಉತ್ತರ ವಲಯ:</u>

ಸದರಿ ಅಧಿಕಾರಿಯು ಸರ್ಕಾರದ ಅಧಿಕಾರ ಪ್ರತ್ಯಾಯೋಜನೆ ಪ್ರಕಾರ ಹಾಗೂ ಸರ್ಕಾರದ ಕಾಯ್ದೆ ಮತ್ತು ನಿಯಮಗಳನುಸಾರ ನೀಲಿನಕ್ಷೆ ಮತ್ತು ಚಾಲನಾ ಅನುಮೋದನೆಯನ್ನು ನೀಡುವುದು, ವಿದ್ಯುತ್ ಅಪಘಾತಗಳ ಮತ್ತು ವಿದ್ಯುತ್‌ನಿಂದ ಸಂಭವಿಸುವ ಬೆಂಕಿ ಅಪಘಾತಗಳ ತನಿಖಾವರದಿಯನ್ನು ಸಲ್ಲಿಸುವುದು,ವಿದ್ಯುತ್ ಸ್ಥಾವರಗಳ ನಿಯಾತಕಾಲಿಕ ಪರಿವೀಕ್ಷಣೆಯನ್ನು ಕೈಗೊಳ್ಳುವುದು,ವಿಭಾಗದಕ್ರೋಢೀಕೃತ ಪ್ರಗತಿ ವರದಿಗಳನ್ನು ಉಪಮುಖ್ಯ ವಿದ್ಯುತ್ ಪರಿವೀಕ್ಷಕರು, ಬೆಂಗಳೂರುರವರಿಗೆ ಸಲ್ಲಿಸುವುದು ಮತ್ತು ಮೇಲೆ ನಮೂದಿಸಿದ ಕಾರ್ಯಗಳಲ್ಲದೆ ಮೇಲಾಧಿಕಾರಿಗಳು ಸೂಚಿಸುವ ಇತರೆ ಕಚೇರಿಯ ಕಾರ್ಯಗಳನ್ನು ನಿರ್ವಹಿಸುವುದು ಮತ್ತು ಅಧೀನ ಕಛೇರಿ ವ್ಯಾಪ್ತಿಗೆ ಬರುವಂತಹ

ಎಲ್ಲಾ ಕಾರ್ಯಗಳು ಸಮಯಕ್ಕೆ ಸರಿಯಾಗಿ, ಸಮರ್ಪಕವಾಗಿ ನಡೆಯುವ ಕುರಿತು ನಿಗಾವಹಿಸುವುದು ಮತ್ತು ಮಾಹಿತಿ ಹಕ್ಕು ಅಧಿನಿಯಮದಡಿಯಲ್ಲಿ ಸ್ವೀಕರಿಸುವಂತಹ ಅರ್ಜಿಗಳನ್ನು ವಿಲೇವಾರಿ ಮಾಡುವುದು,

**4. ಉಪ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಉತ್ತರ ವಲಯ:**

ಸದರಿ ಅಧಿಕಾರಿಯು ಸರ್ಕಾರದ ಅಧಿಕಾರ ಪ್ರತ್ಯಾಯೋಜನೆ ಪ್ರಕಾರ ಹಾಗೂ ಸರ್ಕಾರದ ಕಾಯ್ದೆ ಮತ್ತು ನಿಯಮಗಳನುಸಾರ ನೀಲಿನಕ್ಷೆ ಮತ್ತು ಚಾಲನಾ ಅನುಮೋದನೆಯನ್ನು ನೀಡುವುದು, ವಿದ್ಯುತ್ ಅಪಘಾತಗಳ ತನಿಖಾವರದಿಯನ್ನು ಸಲ್ಲಿಸುವುದು, ವಿದ್ಯುತ್ ಸ್ಥಾವರಗಳ ನಿಯಾತಕಾಲಿಕ ಪರಿವೀಕ್ಷಣೆಯನ್ನು ಕೈಗೊಳ್ಳುವುದು,ನಮೂನೆ–ಜಿ ರಿಜಿಸ್ಟ್ರರ್‌ನ್ನು ನಿರ್ವಹಿಸುವುದು, ವಿದ್ಯುತ್‌ಚ್ಛಕ್ತಿ ತೆರಿಗೆಯ ಮಾಹಿತಿಯನ್ನು ನಿರ್ವಹಿಸುವುದು,ಇವರ ಕಾರ್ಯ ವ್ಯಾಪ್ತಿಗೆ ಬರುವಂತಹಹೊಸ/ನವೀಕರಣದ ಅರ್ಜಿಗಳನ್ನು ಅವರ ಹಂತದಲ್ಲೆ ಸ್ವೀಕರಿಸಿ, ಸರ್ಕಾರದ ಮುಖ್ಯ ವಿದ್ಯುತ್ ಪರಿವೀಕ್ಷಕರು, ಬೆಂಗಳೂರುರವರಿಗೆ ಸಲ್ಲಿಸಲಾಗುವುದು ಹಾಗೂ ಮೇಲ್ವಿಚಾರಕರು/ತಂತಿಕೆಲಸಗಾರರನ್ನು ವಿದ್ಯುತ್ ಗುತ್ತಿಗೆದಾರರಿಗೆ ಹಿಂಬರಹಗೊಳಿಸಲಾಗುವುದುಮತ್ತು ಮೇಲೆ ನಮೂದಿಸಿದ ಕಾರ್ಯಗಳಲ್ಲದೆ ಮೇಲಾಧಿಕಾರಿಗಳು ಸೂಚಿಸುವ ಇತರೆ ಕಚೇರಿಯ ಕಾರ್ಯಗಳನ್ನು ನಿರ್ವಹಿಸುವುದು ಮತ್ತು ಅಧೀನ ಕಛೇರಿ ವ್ಯಾಪ್ತಿಗೆ ಬರುವಂತಹ ಎಲ್ಲಾ ಕಾರ್ಯಗಳು ಸಮಯಕ್ಕೆ ಸರಿಯಾಗಿ, ಸಮರ್ಪಕವಾಗಿ ನಡೆಯುವ ಕುರಿತು ನಿಗಾವಹಿಸುವುದು ಮತ್ತು ಮಾಹಿತಿ ಹಕ್ಕು ಅಧಿನಿಯಮದಡಿಯಲ್ಲಿ ಸ್ವೀಕರಿಸುವಂತಹ ಅರ್ಜಿಗಳನ್ನು ವಿಲೇವಾರಿ ಮಾಡುವುದು,.

**5. ಸಹಾಯಕ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಉತ್ತರ (ಕ್ಷೇತ್ರಿಯ) –1,2, ಮತ್ತು 3**

ಸದರಿ ಅಧಿಕಾರಿಗಳು ಸರ್ಕಾರದ ಅಧಿಕಾರ ಪ್ರತ್ಯಾಯೋಜನೆ ಪ್ರಕಾರ ವಿದ್ಯುತ್ ಸ್ಥಾವರಗಳನ್ನು ಪರಿವೀಕ್ಷಣೆ ಮಾಡಿ ಉಪ ವಿದ್ಯುತ್ ಪರಿವೀಕ್ಷಕರಿಗೆ ಸಲ್ಲಿಸುವುದು ಪ್ರಗತಿ ವರದಿಯನ್ನು ಸಿದ್ದಪಡಿಸುವುದು, ವಿದ್ಯುತ್ ಸ್ಥಾವರಗಳ ಅಂಕಿ–ಅಂಶಗಳನ್ನು ನಿರ್ವಹಣೆ ಮಾಡುವುದು, ಪ್ರಾಣಿಗಳಿಗೆ ಸಂಭವಿಸುವ (ಆನೆಗಳನ್ನು ಹೊರತುಪಡಿಸಿ) ವಿದ್ಯುತ್ ಅಪಘಾತಗಳನ್ನು ತನಿಖೆ ಮಾಡಿ ತನಿಖಾ ವರದಿಯನ್ನು ಉಪ ವಿದ್ಯುತ್ ಪರಿವೀಕ್ಷಕರಿಗೆ ಸಲ್ಲಿಸುವುದು. ನೀಲಿ ನಕ್ಷೆ ಅನುಮೋದನೆ, ಚಾಲನಾ ಅನುಮೋದನೆ, ನಿಯತಕಾಲಿಕ ಪರಿವೀಕ್ಷಕಣೆಯ ಕಡತಗಳ ನಿರ್ವಹಣೆ, ಯಾವುದೇ ತಾಂತ್ರಿಕ ವಿಷಯಗಳ ಪತ್ರ ವ್ಯವಹರಿಸುವುದಕ್ಕೆ ಸಹಕರಿಸುವುದು, ಪ್ರಗತಿ ವರದಿಯನ್ನು ಸಿದ್ದಪಡಿಸುವುದು, ವಿದ್ಯುತ್ ಅಪಘಾತಗಳ ವರದಿಗಳನ್ನು ಸಿದ್ದಪಡಿಸಲು ನೆರವಾಗುವುದು ಮತ್ತು ಮತ್ತು ಮೇಲೆ ನಮೂದಿಸಿದ ಕಾರ್ಯಗಳಲ್ಲದೆ ಮೇಲಾಧಿಕಾರಿಗಳು ಸೂಚಿಸುವ ಇತರೆ ಕಚೇರಿಯ ಕಾರ್ಯಗಳನ್ನು ನಿರ್ವಹಿಸುವುದು.

**6. ಸಹಾಯಕ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಉತ್ತರ (ಕಛೇರಿ)– 1 ಮತ್ತು 2**

ಸಹಾಯಕ ವಿದ್ಯುತ್ ಪರಿವೀಕ್ಷಕರು–1, ರವರು ಅಪರ ಮುಖ್ಯ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಉತ್ತರರವರಿಗೆ ಮತ್ತು ಸಹಾಯಕ ವಿದ್ಯುತ್ ಪರಿವೀಕ್ಷಕರು–02, ರವರು ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಉತ್ತರರವರಿಗೆ ನೀಲಿ ನಕ್ಷೆ ಅನುಮೋದನೆ, ಚಾಲನಾ ಅನುಮೋದನೆ, ನಿಯತಕಾಲಿಕ ಪರಿವೀಕ್ಷಕಣೆಯ ಕಡತಗಳ ನಿರ್ವಹಣೆ, ಯಾವುದೇ ತಾಂತ್ರಿಕ ವಿಷಯಗಳ ಪತ್ರ ವ್ಯವಹರಿಸುವುದಕ್ಕೆ ಸಹಕರಿಸುವುದು, ಪ್ರಗತಿ ವರದಿಯನ್ನು ಸಿದ್ದಪಡಿಸುವುದು, ವಲಯದ ಪ್ರಗತಿ ವರದಿಯನ್ನು ಕ್ರೋಢೀಕರಿಸುವುದು, ವಿದ್ಯುತ್ ಅಪಘಾತಗಳ ವರದಿಗಳನ್ನು ಸಿದ್ದಪಡಿಸಲು ನೆರವಾಗುವುದು ಮತ್ತು ಮೇಲೆ ನಮೂದಿಸಿದ ಕಾರ್ಯಗಳಲ್ಲದೆ ಮೇಲಾಧಿಕಾರಿಗಳು ಸೂಚಿಸುವ ಇತರೆ ಕಚೇರಿಯ ಕಾರ್ಯಗಳನ್ನು ನಿರ್ವಹಿಸುವುದು.

ಅಲ್ಲದೆ ಮಾಹಿತಿ ಹಕ್ಕು ಅಧಿನಿಯಮದಡಿಯಲ್ಲಿ ಸ್ವೀಕರಿಸುವಂತಹ ಅರ್ಜಿಗಳನ್ನು ವಿಲೇವಾರಿ ಮಾಡುವುದು, ವಿಧಾನಸಭೆ, ವಿಧಾನಮಂಡಲಗಳಿಂದ/ ಮುಖ್ಯ ವಿದ್ಯುತ್ ಪರಿವೀಕ್ಷಕರಿಂದ ಕೇಳುವ ಇತರೆ ಮಾಹಿತಿಯನ್ನು ಈ

ವಲಯದ ಎಲ್ಲಾ ಕಛೇರಿಗಳಿಂದ ಪಡೆದು ಕ್ರೋಢೀಕೃತ ವರದಿಯನ್ನು ಮುಖ್ಯ ವಿದ್ಯುತ್ ಪರಿವೀಕ್ಷಕರಿಗೆ ಸಲ್ಲಿಸುವುದು ಹಾಗೂ ಇನ್ನಿತರೆ ಕೆಲಸಗಳನ್ನು ನಿರ್ವಹಿಸುವುದು.

7. **ಲೆಕ್ಕಾಧಿಕಾರಿಗಳು:–**

ಸದರಿ ಅಧಿಕಾರಿಯು ತಮ್ಮ ಕಾರ್ಯವ್ಯಾಪ್ತಿಯಲ್ಲಿ ಬರುವಂತಹ ಕೆ.ಪಿ.ಸಿ.ಎಲ್/ಬೆಸ್ಕಾಂ/ಐಪಿಪಿ ಮತ್ತು ವಿದ್ಯುತ್ ಗ್ರಾಹಕರುಗಳಿಂದ ವಸೂಲಾಗುವ ವಿದ್ಯುತ್ ತೆರಿಗೆಯ ಮಾಹಿತಿಯನ್ನು ರಿಜಿಸ್ಟರ್‌ನಲ್ಲಿ ನಿರ್ವಹಿಸುವುದು, ಲೆಕ್ಕ ಪರಿಶೋಧನೆ ಕೈಗೊಳ್ಳುವುದು, ನಮೂನೆ–ಜಿ ಮೇಲ್ವಿಚಾರಣೆ ಮಾಡುವುದು ಮತ್ತು ಮೇಲೆ ನಮೂದಿಸಿದ ಕಾರ್ಯಗಳಲ್ಲದೆ ಮೇಲಾಧಿಕಾರಿಗಳು ಸೂಚಿಸುವ ಇತರೆ ಕಚೇರಿಯ ಕಾರ್ಯಗಳನ್ನು ನಿರ್ವಹಿಸುವುದು.

ಅಲ್ಲದೆ ಮಾಹಿತಿ ಹಕ್ಕು ಅಧಿನಿಯಮದಡಿಯಲ್ಲಿ ಸ್ವೀಕರಿಸುವಂತಹ ಅರ್ಜಿಗಳನ್ನು ವಿಲೇವಾರಿ ಮಾಡುವುದು, ವಿಧಾನಸಭೆ, ವಿಧಾನಮಂಡಲಗಳಿಂದ/ ಮುಖ್ಯ ವಿದ್ಯುತ್ ಪರಿವೀಕ್ಷಕರಿಂದ ಕೇಳುವ ಇತರೆ ಮಾಹಿತಿಯನ್ನು ಈ ವಲಯದ ಎಲ್ಲಾ ಕಛೇರಿಗಳಿಂದ ಪಡೆದು ಕ್ರೋಢೀಕೃತ ವರದಿಯನ್ನು ಮುಖ್ಯ ವಿದ್ಯುತ್ ಪರಿವೀಕ್ಷಕರಿಗೆ ಸಲ್ಲಿಸುವುದು ಹಾಗೂ ಇನ್ನೀತರೆ ಕೆಲಸಗಳನ್ನು ನಿರ್ವಹಿಸುವುದು.

8. **ವ್ಯವಸ್ಥಾಪಕರು:**

ಸದರಿ ಅಧಿಕಾರಿಯು ಈ ಕಛೇರಿಯ ಹಾಜರಾತಿ ಪುಸ್ತಕವನ್ನು ನಿರ್ವಹಿಸುವುದು, ಈ ಕಛೇರಿ ಮತ್ತು ಅಧೀನ ಕಛೇರಿಗಳ ವಾರ್ಷಿಕ ಅನುದಾನ ಪಟ್ಟಿಯನ್ನು ಸಿದ್ದಪಡಿಸುವುದು ಮತ್ತು ಹಂಚಿಕೆಗೊಳಿಸುವುದು, ಖರ್ಚುವೆಚ್ಚಗಳ, 0043 ಕಂದಯ, ಈ ಕಛೇರಿಯ ಪೀಠೋಪಕರಣಗಳ ಪಟ್ಟಿಯನ್ನು ನಿರ್ವಹಿಸುವುದು, ಲೆಕ್ಕ ಪತ್ರ ಇಲಾಖೆಯವರು ಲೆಕ್ಕ ಪರಿಶೋಧನೆಗೆ ಬಂದಾಗ ಅವರಿಗೆ ಸಹಕರಿಸಿ ಅದಕ್ಕೆ ಸಂಬಂಧಿಸಿದ ಪತ್ರ ವ್ಯವಹಾರಗಳನ್ನು ನಡೆಸುವುದು, ನ್ಯಾಯಾಲಯದ ಮೊಕದ್ದಮೆಗಳಿಗೆ ಸಂಬಂಧಿಸಿದ ಪತ್ರ ವ್ಯವಹಾರ ನಡೆಸುವುದುಮತ್ತು ಮೇಲೆ ನಮೂದಿಸಿದ ಕಾರ್ಯಗಳಲ್ಲದೆ ಮೇಲಾಧಿಕಾರಿಗಳು ಸೂಚಿಸುವ ಇತರೆ ಕಚೇರಿಯ ಕಾರ್ಯಗಳನ್ನು ನಿರ್ವಹಿಸುವುದು.

9. **ಅಧೀಕ್ಷಕರು: 1 ಮತ್ತು 2**

ಸದರಿ ಅಧಿಕಾರಿಯು ಖರ್ಚು ವೆಚ್ಚದ ಪಟ್ಟಿ (62 ಬಿ), 2045 ಮತ್ತು 0043 ಕಂದಾಯ ವಸೂಲಾತಿ ಮಾಹಿತಿಯನ್ನು ನಿರ್ವಹಿಸುವುದು ಈ ಕಛೇರಿಯ ಎಲ್ಲಾ ಅಧಿಕಾರಿಗಳ/ಸಿಬ್ಬಂದಿಗಳ ಸೇವಾ ಪುಸ್ತಕವನ್ನು ನಿರ್ವಹಿಸುವುದು. ಆದಾಯ ತೆರಿಗೆ ಮಾಹಿತಿಯನ್ನು ನಿರ್ವಹಿಸುವುದು ಮಾಹಿತಿ ಹಕ್ಕು ಅಧಿನಿಯಮದ ಕಡತಗಳನ್ನು ನಿರ್ವಹಿಸುವುದು ನ್ಯಾಯಾಲಯಕ್ಕೆ ಸಂಬಂಧಿಸಿದ ವಿದ್ಯುಚ್ಛಕ್ತಿ ತೆರಿಗೆಗೆ ಸಂಬಂಧಿಸಿದ. ಇಲಾಖಾ ವಿಚಾರಣೆಯ, ಅಂತರಿಕ ಮತ್ತು ಬಾಹ್ಯ ಲೆಕ್ಕಪರಿಶೋಧನೆಯ ಕಡತಗಳನ್ನು ನಿರ್ವಹಿಸುವುದು ಮತ್ತು ವ್ಯವಹರಿಸುವುದು.

ವರ್ಗ–1 ಮತ್ತು ವರ್ಗ–2ರ ಪರವಾನಗಿಯ, ನವೀಕರಣದ ಮತ್ತು ಹಿಂಬರಹದ, ಸಿನಿಮಾ ಚಾಲಕರ ಪರವಾನಗಿಗಳ ಮಾಹಿತಿಯನ್ನು ನಿರ್ವಹಿಸುವುದು ಮತ್ತು ಮೇಲೆ ನಮೂದಿಸಿದ ಕಾರ್ಯಗಳಲ್ಲದೆ ಮೇಲಾಧಿಕಾರಿಗಳು ಸೂಚಿಸುವ ಇತರೆ ಕಚೇರಿಯ ಕಾರ್ಯಗಳನ್ನು ನಿರ್ವಹಿಸುವುದು.

10. **ಪ್ರಥಮ ದರ್ಜೆ ಸಹಾಯಕರು:1**

ಸದರಿ ಸಿಬ್ಬಂದಿವರು ಅಧೀಕ್ಷಕರಿಗೆ ವರ್ಗ–1ರ ಪರವಾನಗಿಗಳ ನವೀಕರಣದ/ಹಿಂಬರಹದ ಹೊಸದಾಗಿ ಸಲ್ಲಿಸುವ ಅರ್ಜಿಗಳ ತಪಾಸಣೆಗೆ ಸಹಕರಿಸುವುದು, ಹೆಚ್.ಆರ್.ಎಂ.ಎಸ್.ನಲ್ಲಿ ಈ ಕಛೇರಿ ಅಧಿಕಾರಿಗಳ/ಸಿಬ್ಬಂದಿಗಳ ಮಾಹಿತಿಯನ್ನು ಕಾಲಕಾಲಕ್ಕೆ ಪರಿಷ್ಕೃಸುವುದು , ರಜಾ ಅರ್ಜಿಗಳು ಅದಕ್ಕೆ ಸಂಬಂಧಿಸಿದಪತ್ರ ವ್ಯವಹಾರ, ತಿಂಗಳ ವೇತನ , ಪ್ರಯಾಣಭತ್ಯೆ, 0043.2045 ಗಳ ನಿರ್ವಹಣೆ ಮಾಡುವುದು, ಮೇಲುರುಜು ಬಿಲ್ಲುಗಳನ್ನು ನಿರ್ವಹಣೆ ಮಾಡುವುದು ಮತ್ತು ಮೇಲೆ ನಮೂದಿಸಿದ ಕಾರ್ಯಗಳಲ್ಲದೆ ಮೇಲಾಧಿಕಾರಿಗಳು ಸೂಚಿಸುವ ಇತರೆ ಕಚೇರಿಯ ಕಾರ್ಯಗಳನ್ನು ನಿರ್ವಹಿಸುವುದು.

11. **<u>ಪ್ರಥಮ ದರ್ಜೆ ಸಹಾಯಕರು:2</u>**

ಸದರಿ ಸಿಬ್ಬಂದಿವರು ಅಧೀಕ್ಷಕರಿಗೆ ವರ್ಗ–2ರ ಪರವಾನಗಿಗಳ ನವೀಕರಣದ/ಹಿಂಬರಹದ ಹೊಸದಾಗಿ ಸಲ್ಲಿಸುವ ಅರ್ಜಿಗಳ ತಪಾಸಣೆಗೆ ಸಹಕರಿಸುವುದು, ಈ ಕಛೇರಿಗೆ ಸಂಬಂಧಿಸಿದ ಎಲ್ಲಾ ರೀತಿಯ ಡಿ.ಸಿ.ಬಿಲ್ಲುಗಳನ್ನು ನಿರ್ವಹಣೆ ಮಾಡುವುದು, ಈ ಕಛೇರಿ ಪೀಠೋಪಕರಣಗಳ ನಿರ್ವಹಣೆ ಮಾಡುವುದು ಮತ್ತು ಮೇಲೆ ನಮೂದಿಸಿದ ಕಾರ್ಯಗಳಲ್ಲದೆ ಮೇಲಾಧಿಕಾರಿಗಳು ಸೂಚಿಸುವ ಇತರೆ ಕಚೇರಿಯ ಕಾರ್ಯಗಳನ್ನು ನಿರ್ವಹಿಸುವುದು.

12. **<u>ಶೀಘ್ರಲಿಪಿಗಾರರು:</u>**

ಸದರಿಯವರು ಈ ವಲಯದ ಎಲ್ಲಾ ಅಧಿಕಾರಿಗಳ/ಸಿಬ್ಬಂದಿಗಳ ಗೌಪ್ಯ ವರದಿಗಳನ್ನು ನಿರ್ವಹಣೆ ಮಾಡುವುದು, ಸಭೆಯ ನಡಾವಳಿಗಳನ್ನು ತಯಾರಿಸುವುದು ಈ ಕಛೇರಿಯಿಂದ ನೀಡುವ ಅನುಮೋದನೆಗಳನ್ನು ಬೆರಳುಚ್ಚುಗೊಳಿಸುವುದು ಅಪಘಾತಗಳ ವರದಿಗಳನ್ನು ಬೆರಳಚ್ಚುಗೊಳಿಸುವುದು ಹೆಚ್.ಆರ್.ಎಂ.ಎಸ್. ಕೆಲಸವನ್ನು ನಿರ್ವಹಿಸುವುದು ಮತ್ತು ಮೇಲೆ ನಮೂದಿಸಿದ ಕಾರ್ಯಗಳಲ್ಲದೆ ಮೇಲಾಧಿಕಾರಿಗಳು ಸೂಚಿಸುವ ಇತರೆ ಕಚೇರಿಯ ಕಾರ್ಯಗಳನ್ನು ನಿರ್ವಹಿಸುವುದು.

13. **<u>ದ್ವಿತೀಯ ದರ್ಜೆ ಸಹಾಯಕರು:1 ಮತ್ತು 2</u>**

ಸದರಿಯವರು ಈ ಕಛೇರಿಗೆ ಸ್ವೀಕರಿಸುವ ಅರ್ಜಿಗಳನ್ನು ಮತ್ತು ರವಾನೆಯಾಗುವ ಅರ್ಜಿಗಳ ರಿಜಿಸ್ಟರ್ ನಿರ್ವಹಣೆ ಮಾಡುವುದು, ಅಂಚೆಚೀಟಿಯ ರಿಜಿಸ್ಟರ್ ನಿರ್ವಹಣೆ, ನಮೂನೆ–ಜಿ ರಿಜಿಸ್ಟರ್ ನಿರ್ವಹಣೆ ಚಲನ ವಲನ ಪುಸ್ತಕ ನಿರ್ವಹಣೆ ಕಛೇರಿಯ ಪ್ರಧಾನ ಕಡತವನ್ನು ನಿರ್ವಹಿಸುವುದು ಮತ್ತು ಮೇಲೆ ನಮೂದಿಸಿದ ಕಾರ್ಯಗಳಲ್ಲದೆ ಮೇಲಾಧಿಕಾರಿಗಳು ಸೂಚಿಸುವ ಇತರೆ ಕಚೇರಿಯ ಕಾರ್ಯಗಳನ್ನು ನಿರ್ವಹಿಸುವುದು.

## III. <u>ಮೇಲ್ವಿಚಾರಣೆ ಮತ್ತು ಹೊಣೆಗಾರಿಕೆಯ ಮಾರ್ಗಗಳು ಸೇರಿದಂತೆ ತೀರ್ಮಾನ ತೆಗೆದುಕೊಳ್ಳುವ ಪ್ರಕ್ರಿಯೆಗಳಲ್ಲಿ ಅನುಸರಿಸಬೇಕಾದ ಕಾರ್ಯ ವಿಧಾನ:</u> –

ಸರ್ಕಾರದ ಪ್ರತ್ಯಾಯೋಜನೆ ಮತ್ತು ಸರ್ಕಾರದ ಕಾಯ್ದೆ ಮತ್ತು ನಿಯಗಳನುಸಾರ ಈ ಕಛೇರಿಯಲ್ಲಿ ಸ್ವೀಕರಿಸುವಂತಹ ಅರ್ಜಿಗಳನ್ನು ಸಂಬಂಧಿಸಿದ ಅಧಿಕಾರಿಗಳು ಅರ್ಜಿಗಳನ್ನು/ನೀಲಿ ನಕ್ಷೆಗಳನ್ನು ಪರಿಶೀಲಿಸಿ ನ್ಯೂನತೆಗಳಿದ್ದರೆ ಗ್ರಾಹಕರಿಗೆ ತಿಳಿಸಿ ಸರಿಪಡಿಸಿದಂತಹ ನೀಲಿ ನಕ್ಷೆ/ ಅರ್ಜಿಗಳನ್ನು ಅನುಮೋದನೆ ನೀಡುವುದು. ಗ್ರಾಹಕರಿಂದ ಕಾರ್ಯ ಸಮಾಪನ ವರದಿ ಸ್ವೀಕರಿಸಿದ ನಂತರ ಪ್ರಥಮ ಪರಿವೀಕ್ಷಣೆಗೆ ತೆರಳಿ ಸ್ಥಾವರವು ನಿಯಮಾನುಸಾರ ಇಲ್ಲದಿದ್ದರೆ ಅಂತಹ ಗ್ರಾಹಕರಿಗೆ ನ್ಯೂನತಾ ಪಟ್ಟಿಯನ್ನು ನೀಡಿ ಗ್ರಾಹಕರಿಗೆ ಕಾರ್ಯ ಪರಿಸಮಾಪ್ತಿ ವರದಿ ಬಂದ ನಂತರ ವಿದ್ಯುತ್ ಸ್ಥಾವರಗಳು ಸರಿಯಾಗಿದೆ ಎಂಬುದು ದೃಡಪಟ್ಟ ನಂತರ ನಿಯಮಾನುಸಾರ ಚಾಲನಾ ಅನುಮೋದನೆ ನೀಡುವುದು.

ಸರ್ಕಾರದ ಪ್ರತ್ಯಾಯೋಜನೆ ಪ್ರಕಾರ ಎಲ್ಲಾ ವಿದ್ಯುತ್ ಸ್ಥಾವರಗಳ ನಿಯತಕಾಲಿಕ ಪರಿವೀಕ್ಷಣೆಯನ್ನು ಕೈಗೊಂಡು ನ್ಯೂನತಾ ಪಟ್ಟಿಯನ್ನು ಸಂಬಂಧಿಸಿದ ಗ್ರಾಹಕರಿಗೆ ನೀಡುವುದು.

## IV. <u>ಇಲಾಖಾ ಕಾರ್ಯಗಳ ನಿರ್ವಹಣೆಗೆ ರೂಪಿಸಿರುವ ಕಾರ್ಯ ಸೂಚಿಗಳು:–</u>

ವಿದ್ಯುತ್ ಪರಿವೀಕ್ಷಣಾಲಯ ಇಲಾಖೆಯು ತನ್ನ ಕಚೇರಿಯ ಕೆಲಸ ಸೂಸೂತ್ರವಾಗಿ ನಿರ್ವಹಿಸಲು ಪರಿವೀಕ್ಷಣಾ ಕೈಪಿಡಿ (ಮ್ಯಾನ್ಯುಯಲ್) –1987, ವಿದ್ಯುತ್ ಬಳಕೆ ಮೇಲಿನ ತೆರಿಗೆ ಕೈಪಿಡಿ, ಲಿಫ್ಟ್ ನಿಯಮಗಳು ಕೈಪಿಡಿಗಳನ್ನು ಮತ್ತು ಕರ್ನಾಟಕ ಸರ್ಕಾರದಿಂದ ಸೃಜನೆಗೊಂಡ ಕಚೇರಿ ನಿಯಮಗಳನ್ನು ಪಾಲಿಸಲಾಗಿರುತ್ತದೆ.

## V. <u>ಇಲಾಖಾ ಕಾರ್ಯ ನಿರ್ವಹಿಸುವುದಕ್ಕೆ ಬಳಸುವ ನಿಯಮಗಳು ಅನುಸೂಚಿಗಳು, ಕೈಪಿಡಿ ಮತ್ತು ದಾಖಲೆಗಳು</u>

1. ಭಾರತೀಯ ವಿದ್ಯುತ್ ಕಾಯ್ದೆ – 2003.
2. ಕೇಂದ್ರಿಯ ವಿದ್ಯುಚ್ಛಕ್ತಿ ಪ್ರಾಧಿಕಾರ (ಸುರಕ್ಷತಾ ಹಾಗೂವಿದ್ಯುತ್ ಪೂರೈಕೆಗೆ ಸಂಬಂಧಿಸಿದ) ನಿಬಂಧನೆಗಳು, 2010.
3. ಕರ್ನಾಟಕ ಸಿನಿಮ (ನಿಯಂತ್ರಣ) ಕಾಯ್ದೆ 1964 ಮತ್ತು ನಿಯಮಗಳು 2014.
4. ಕರ್ನಾಟಕ ಲಿಫ್ಟ್‌ಗಳ, ಎಸ್ಕಲೇಟರಗಳ ಮತ್ತು ಪ್ಯಾಸೆಂಜರ್ ಕನ್ವೇಯರಗಳ ಕಾಯಿದೆ 2012 ಮತ್ತು ನಿಯಮಗಳು 2015ರ
5. ಕರ್ನಾಟಕ ಎಕ್ಷಿಬಿಷನ್ ಆನ್ ಟಿವಿ ತ್ರೂ ವಿಸಿಆರ್ ಆರ್ ಲೇಸರ್ ಡಿಸ್ಕ್ ( ನಿಯಂತ್ರಣ)ನಿಯಮಗಳು–1984.
6. ಕರ್ನಾಟಕ( ವಿದ್ಯುತ್ ಗುತ್ತಿಗೆದಾರರ ಪರವಾನಗಿ ಮತ್ತು ವಿಷೇಶ ತಂತಿ ಕೆಲಸಗಾರರ ರಹದಾರಿ ವಿದ್ಯುತ್ ಮೇಲ್ವಿಚಾರಕರ ಮತು ಕೆಲಸಗಾರರ ಸಕ್ಷಮ ಪ್ರಮಾಣ ಪತ್ರ ಮತ್ತು ರಹದಾರಿ ನೀಡಿಕೆ) ನಿಯಮಗಳು–2012ರ
7. ಕರ್ನಾಟಕ ವಿದ್ಯುಚ್ಛಕ್ತಿ ಬಳಕೆ ಮತ್ತು ಮಾರಾಟದ ಮೇಲಿನ ತೆರಿಗೆ ಕಾಯ್ದೆ 1959 ಮತ್ತು ನಿಯಮಗಳು–2014
8. ಕರ್ನಾಟಕ ವಿದ್ಯುತ್ ಪರಿವೀಕ್ಷಣಾಲಯ(Powers , Functions and levy of fess) , ನಿಯಮಗಳು 2018
9. ನ್ಯಾಷನಲ್ ಎಲೆಕ್ಟ್ರಿಸಿಟಿ ಕೋಡ್ – 1985.
10. ಪರಿವೀಕ್ಷಣಾ ಕೈಪಿಡಿ
11. ಕೆ.ಸಿ.ಎಸ್.ಆರ್– 1958.
12. ಕೆ.ಎಫ್.ಸಿ– 1958,
13. ಕೆ.ಟಿ.ಸಿ.
14. ಸಿ.ಸಿ.ಎ.ಕಂಡಕ್ಟ್ ರೂಲ್ಸ್
15. ಎಂ.ಸಿ.ಇ.
16. ಕಚೇರಿ ಕೈಪಿಡಿ.

## VI. ಇಲಾಖೆಯು ಹೊಂದಿರುವ ದಾಸ್ತಾವೇಸುಗಳ ಪ್ರವರ್ಗಗಳ ವಿವರ ಪಟ್ಟಿ

ಅ. <u>**ಆಡಳಿತಕ್ಕೆ ಸಂಬಂಧಪಟ್ಟಂತೆ ನಿರ್ವಹಿಸಿರುವ ರಿಜಿಸ್ಟರುಗಳು ಮತ್ತು ಕಡತಗಳು:**</u>

1. ಸೇವಾ ಪುಸ್ತಕಗಳು ಹಾಗೂ ವೇತನ ರಿಜಿಸ್ಟರ್‌ಗಳು.
2. ವೇತನ ಸೆಳೆತ, ಸಾಲ ವಸೂಲಿ ಮುಂಗಡಗಳು ಇದಕ್ಕೆ ಸಂಬಂಧಪಟ್ಟ ರಿಜಿಸ್ಟರುಗಳು.
3. ವೇತನ ಬಟವಾಡೆ ಹಾಗೂ ಪ್ರವಾಸ ಭತ್ಯೆ ಹಣ ಬಟವಾಡೆ ಪುಸ್ತಕ.
4. ಬಿಲ್ ರಿಜಿಸ್ಟರ್‌ಗಳು.
5. ಗಳಿಕೆ ರಜೆ ನಗದೀಕರಣ ಮತ್ತು ರಜಾ ಮಂಜೂರಾತಿ ರಿಜಿಸ್ಟರ್.
6. ಆಡಳಿತ ಮತ್ತು ನ್ಯಾಯಾಲಯದ ಕಡತ.
7. ಅನುದಾನ ಅಂದಾಜು ಮತ್ತು ಅನುದಾನ ಹಂಚಿಕೆ ರಿಜಿಸ್ಟರ್‌ಗಳು
8. ಕಚೇರಿ ವೆಚ್ಚ ರಿಜಿಸ್ಟರ್‌ಗಳು.
9. ಆಡಳಿತ ವಿಷಯಕ್ಕೆ ಸಂಬಂಧಪಟ್ಟ ಕಡತಗಳು.
10. ವೈದ್ಯಕೀಯ ವೆಚ್ಚ ಮರುಪಾವತಿ ಕಡತಗಳು.

11. ಸ್ವೀಕೃತಿ ಮತ್ತು ರವಾನೆ ರಿಜಿಸ್ಟರ್‌ಗಳು.
12. ಸಾಮಾನ್ಯ ಆತಳಿತಾತ್ಮಕ ಸುತ್ತೋಲೆಗಳ ಕಡತ.
13. ಕೋರ್ಟ್ ಕೇಸ್ ಕಡತ.
14. ಆರ್. ಸಿ. ಬಿ ಫೈಲ್.
15. ನಗದು ಪುಸ್ತಕ ಮತ್ತು ರಶೀದಿ ಪುಸ್ತಕಗಳು.
16. ವಿವಿಧ ವಿಭಾಗಗಳಿಂದ ಸಂದಾಯವಾಗುವ ಡಿ.ಡಿ/ರಶೀದಿ/ಚೆಕ್ಕ
17. ಹಣ ಪಾವತಿಸಿದ ವಿವರಗಳು.
18. ಡಿ.ಡಿ./ ಚೆಕ್ಕುಗಳನ್ನು ಬ್ಯಾಂಕಿಗೆ ಸಂದಾಯ ಮಾಡುವ ರಿಜಿಸ್ಟರ್‌ಗಳು.
19. ಖಾಯಂ ಮುಂಗಡ ರಿಜಿಸ್ಟರುಗಳು.
20. ಸಿನಿಮಾ ಆಪರೇಟರ್‌ಗಳ ನವೀಕರಣ ಮತ್ತು ಹಿಂಬರಹ ರಿಜಿಸ್ಟ್ರರ್‌ಗಳು
21. ವಿದ್ಯುತ್ ಗುತ್ತಿಗೆದಾರರ ಹೊಸ ಮತ್ತು ನವೀಕರಣ ಮತ್ತು ವಿಶೇಷ ತಂತಿ ಕೆಲಸಗಾರರ ರಿಜಿಸ್ಟ್ರರ್‌ಗಳು.
22. ವಿದ್ಯುತ್ ಮೇಲ್ವಿಚಾರ ಮತ್ತು ಮೈನಿಂಗ್ ಮತ್ತು ಕೈಗಾರಿಕಾ ಪರ್ಮಿಟ್ ರಹದಾರಿಗಳ ರಿಜಿಸ್ಟ್ರರ್‌ಗಳು
23. ಹೊಸದಾಗಿ/ನವೀಕರಣ ಸ್ವೀಕರಿಸುವ ತಂತಿ ರಹದಾರಿ ರಿಜಿಸ್ಟ್ರರ್
24. ಹೊಸದಾಗಿ ಮತ್ತು ನವೀಕರಣಕ್ಕಾಗಿ ಸ್ವೀಕರಿಸುವ ವಿದ್ಯುತ್ ಮೇಲ್ವಿಚಾರ ಮತ್ತು ಮೈನಿಂಗ್ ಮತ್ತು ಕೈಗಾರಿಕಾ ಪರ್ಮಿಟ್ ರಹದಾರಿಗಳ ರಿಜಿಸ್ಟ್ರರ್‌ಗಳು
25. ವಿದ್ಯುಚ್ಛಕ್ತಿ ತೆರಿಗೆ ರಿಜಿಸ್ಟರ್
26. ಆರ್.ಟಿ.ಐ. ಕಡತ ಮತ್ತು ರಿಜಿಸ್ಟರ್‌ಗಳು

**ಆ. ತಾಂತ್ರಿಕ ವಿಭಾಗ**

1. ನೀಲಿ ನಕ್ಷೆ ಅನುಮೋದನೆ ರಿಜಿಸ್ಟರ್‌ಗಳು.
2. ಚಾಲನಾ ಅನುಮೋದನೇ ರಿಜಿಸ್ಟರ್‌ಗಳು.
3. ಆರ್.ಟಿ.ಐ. ಕಡತ ಮತ್ತು ರಿಜಿಸ್ಟರ್‌ಗಳು.
4. ವಿದ್ಯುತ್ ಅಪಘಾತಗಳ ಪತ್ರ ವ್ಯವಹಾರಗಳ ಮತ್ತು ಸುತ್ತೋಲೆಗಳ ರಿಜಿಸ್ಟರ್‌ಗಳು.
5. ನಿಯತಕಾಲಿಕ ಪರಿವೀಕ್ಷಣೆಯ ಕಡತಗಳು.
6. ತಂತ್ರಿಕ ಸುತ್ತೋಲೆಗಳ ಕಡತ.
7. ವಿದ್ಯುತ್ ಸ್ಥಾವರಗಳ ಅಂಕಿ ಅಂಶಗಳ ವಿವರಗಳು.
8.ವಿದ್ಯುತ್ ಅಪಘಾತಗಳ ಅಂಕಿ ಅಂಶಗಳ ರಿಜಿಸ್ಟರ್‌ಗಳು.
9. ಕಚೇರಿ ಗಣಕ ಯಂತ್ರಗಳ ರಿಜಿಸ್ಟರ್‌ಗಳು.
10. ಕಛೇರಿ ಅಧುನೀಕರಣ (ಆನ್‌ಲೈನ್)
11. ಕಾಲಕಾಲಕ್ಕೆ ತಿದ್ದುಪಡಿಯಾಗುವ ಕಾಯ್ದೆ ಮತ್ತು ನಿಯಮಗಳ ಕಡತ.
12. ತಾಂತ್ರಿಕ ಪತ್ರ ವ್ಯವಹಾರಗಳ ಮತ್ತು ಸುತ್ತೋಲೆಗಳ ಕಡತ.
13. ಪ್ರಗತಿ ವರದಿಯ ಕಡತ.

VII **ಇಲಾಖೆಯ ಕಾರ್ಯನೀತಿಯ ರಚನೆ ಅಥವಾ ಅದರ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಸಾರ್ವಜನಿಕರೊಡನೆ ಸಮಾಲೋಚಿಸಲು ಅಥವಾ ಅವರ ಪ್ರಾತಿನಿಧ್ಯವಿರುವಂತೆ ಮಾಡಲು ಇರುವಂಥ ವ್ಯವಸ್ಥೆಯ ವಿವರಗಳು**

- ಅಂತಹ ವ್ಯವಸ್ಥೆ ಇರುವುದಿಲ್ಲ.

**VIII ಮಂಡಳಿಗಳು, ಪರಿಷತ್ತುಗಳು ಸಮಿತಿಗಳು ಅಥವಾ ಇತರ ನಿಕಾಯಗಳು ಮತ್ತು ಅದರ ಭಾಗವಾಗಿ ಅಥವಾ ಅದರ ಸಲಹೆಯ ಉದ್ದೇಶಕ್ಕಾಗಿ ರಚಿತವಾದ ಇಬ್ಬರು ಅಥವಾ ಹೆಚ್ಚು ವ್ಯಕ್ತಿಗಳನ್ನೊಳಗೊಂಡ ಮಂಡಳಿಗಳ ಪರಿಷತ್ತುಗಳ, ಸಮಿತಿಗಳ**

**ಮತ್ತು ಇತರ ನಿಕಾಯಗಳ ಸಭೆಗಳು ಸಾರ್ವಜನಿಕರಿಗೆ ಮುಕ್ತವಾಗಿರುತ್ತವೆಯೇ ಅಥವಾ ಅಂತಹ ಸಭೆಗಳ ನಡಾವಳಿಗಳು ಸಾರ್ವಜನಿಕರಿಗೆ ದೊರೆಯುತ್ತವೆಯೇ ಎಂಬುದರ ವಿವರ ಪಟ್ಟಿ**

- ಅಂತಹ ವ್ಯವಸ್ಥೆ ಇರುವುದಿಲ್ಲ.

**IX .ಅಧಿಕಾರಿಗಳು ಮತ್ತು ನೌಕರ ನಿರ್ದೇಶಿಕೆ:–**

| ಕ್ರಮ ಸಂಖ್ಯೆ: | ಹುದ್ದೆಯ ವಿಭಾಗ | ಹೆಸರು ಶ್ರೀಯುತ/ಶ್ರೀಮತಿ | ದೂರವಾಣಿ: |
|---|---|---|---|
| 1 | ಅಪರ ಮುಖ್ಯ ವಿದ್ಯುತ್ ಪರಿವೀಕ್ಷಕರು, | ಪದ್ಮನಾಭ ಕೆ(ಪ್ರಭಾರ) | 080–23420022 |
| 2 | ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು | ಕಾಂತರಾಜು ಕೆ.ಎಂ | 080–23420035 |
| 3 | ವಿದ್ಯುತ್ ಪರಿವೀಕ್ಷಕರು, | ಎಲ್. ಮೇಘನಾಯ್ಕ್ | 080–23420056 |
| 4 | ಉಪ ವಿದ್ಯುತ್ ಪರಿವೀಕ್ಷಕರು, | ಶ್ರೀಮತಿ ಬಿ.ಎಸ್. ಮುಕ್ತಾಂಬ | 080–23420022 |
| 5 | ಸಹಾಯಕ ವಿದ್ಯುತ್ ಪರಿವೀಕ್ಷಕರು (ಕಛೇರಿ–1) | ಕು. ವಿನುತಲಕ್ಷ್ಮಿ ಎಸ್.ಆರ್ | 080–23420022 |
| 6 | ಸಹಾಯಕ ವಿದ್ಯುತ್ ಪರಿವೀಕ್ಷಕರು (ಕಛೇರಿ–2 | ಖಾಲಿ ಹುದ್ದೆ | 080–23420022 |
| 7 | ಸಹಾಯಕ ವಿದ್ಯುತ್ ಪರಿವೀಕ್ಷಕರು–1 (ಕ್ಷತ್ರೀಯ) | ಖಾಲಿ ಹುದ್ದೆ | 080–23420022 |
| 8 | ಸಹಾಯಕ ವಿದ್ಯುತ್ ಪರಿವೀಕ್ಷಕರು–(ಕ್ಷತ್ರೀಯ) | ಧೃವಕುಮಾರ್ ಎಂ. | 080–23420022 |
| 9 | ಸಹಾಯಕ ವಿದ್ಯುತ್ ಪರಿವೀಕ್ಷಕರು–3 (ಕ್ಷತ್ರೀಯ) | ರವೀಶ್ ಎಂ.ಪಿ | 080–23420022 |
| 10 | ಲೆಕ್ಕಾಧಿಕಾರಿಗಳು | ಶ್ರೀಮತಿ ನಾಗರತ್ನ ಜಿ.ಎನ್. (ಪ್ರಭಾರ) | 080–23420022 |
| 11 | ಪತ್ರಾಂಕಿತ ವ್ಯವಸ್ಥಾಪಕರು | ಶ್ರೀಮತಿ ನಾಗರತ್ನ ಜಿ.ಎನ್. | 080–23420022 |
| 12 | ಅಧೀಕ್ಷಕರು–1 | ಶ್ರೀಮತಿ ಗಂಗೂಬಾಯಿ | 080–23420022 |
| 13 | ಅಧೀಕ್ಷಕರು–2 | ಶ್ರೀ. ರವಿಕುಮಾರ್ ಸಿ.ಎನ್ | 080–23420022 |
| 14 | ಪ್ರ ದ ಸ–1 ಹುದ್ದೆ | ಖಾಲಿ ಇದೆ | 080–23420022 |
| 15 | ಪ್ರ ದ ಸ–2 ಹುದ್ದೆ | ಖಾಲಿ ಇದೆ | |
| 16 | ಬೆರಳಚ್ಚುಗಾರರು/ಶೀಘ್ರ ಲಿಪಿಕಾರರು | ಖಾಲಿ ಇದೆ | |
| 17 | ದ್ವಿ ದ ಸ–1, | ಶ್ರೀಮತಿ ಆಶಾ ಬಿ | 080–23420022 |
| 18 | ದ್ವಿ.ದ.ಸ–2 | ಖಾಲಿ ಇದೆ | ---------- |
| 19 | ವಾಹನ ಚಾಲಕ | ಖಾಲಿ | |
| 20 | ಸಹಾಯಕರು | ಖಾಲಿ | ---------- |
| 21 | ಗ್ರೂಪ್ 'ಡಿ' ಜವಾನ | ಶ್ರೀ ರಮೇಶ್ | 080–23420022 |

**X .ಇಲಾಖೆಯ ನಿಯಮಗಳಲ್ಲಿ ಉಪಬಂಧಿಸಿದಂತೆ ಪರಿಹಾರದ ವ್ಯವಸ್ಥೆಯೂ ಸೇರಿದಂತೆ ಅದರ ಪ್ರತಿಯೊಬ್ಬ ಅಧಿಕಾರಿ ಮತ್ತು ನೌಕರರು ಪಡೆಯುವ ತಿಂಗಳ ವೇತನ :–**

| ಕ್ರಮ ಸಂಖ್ಯೆ: | ಹುದ್ದೆಯ ಹೆಸರು | ಮಂಜೂರಾದ ಸಿಬ್ಬಂದಿ | ವೇತನ ಶ್ರೇಣಿ |
|---|---|---|---|
| 1 | ಅಪರ ಮುಖ್ಯ ವಿದ್ಯುತ್ ಪರಿವೀಕ್ಷಕರು | 01 | 82000–117700 |
| 2 | ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು | 01 | 74400–109600 |
| 3 | ವಿದ್ಯುತ್ ಪರಿವೀಕ್ಷಕರು | 01 | 67550–104600 |
| 4 | ಉಪ ವಿದ್ಯುತ್ ಪರಿವೀಕ್ಷಕರು | 01 | 52650–97100 |
| 5 | ಸಹಾಯಕ ವಿದ್ಯುತ್ ಪರಿವೀಕ್ಷಕರು(ಕಛೇರಿ) | 02 | 43100–83900 |
| 6 | ಸಹಾಯಕ ವಿದ್ಯುತ್ಪರಿವೀಕ್ಷಕರು(ಕ್ಷೇತ್ರಿಯ) | 03 | 43100–83900 |
| 7 | ಲೆಕ್ಕಾಧಿಕಾರಿ | 01 | 52650–97100 |
| 8 | ವ್ಯವಸ್ಥಾಪಕರು | 01 | 40900–78200 |
| 9 | ಅಧೀಕ್ಷಕರು | 02 | 37900–70850 |
| 10 | ಶೀಘ್ರಲಿಪಿಕಾರರು | 01 | 27650–52650 |
| 11 | ಪ್ರ ದ ಸ | 02 | 27650–52650 |
| 12 | ದ್ವಿ ದ ಸ | 02 | 21400–42000 |
| 13 | ಸಹಾಯಕರು | 01 | 21400–42000 |
| 14 | ವಾಹನ ಚಾಲಕರು | 01 | 27650–52650 |
| 15 | ಗ್ರೂಪ್ 'ಡಿ' ಜವಾನ | 01 | 17000–28950 |

**XI. ಎಲ್ಲಾ ಯೋಜನೆಗಳ ವಿವರಗಳನ್ನು ಸೂಚಿಸುವ ಪ್ರಸ್ತಾವಿತ ವೆಚ್ಚಗಳನ್ನು ಮತ್ತು ಮಾಡಲಾದ ಬಟವಾಡೆಗಳ ವರದಿಯನ್ನು ಸೂಚಿಸಿ ಅದರ ಪ್ರತಿಯೊಂದು ಏಜೆನ್ಸಿಗೆ ಹಂಚಿಕೆ ಮಾಡಲಾದ ಆಯವ್ಯಯ:**

– ಈ ಇಲಾಖೆಯು ಯೋಜನೇತರ ಇಲಾಖೆ.

**XII ಹಂಚಿಕೆ ಮಾಡಲಾದ ಮೊಬಲಗನ್ನೊಳಗೊಂಡು ಸಹಾಯಧನ ಕಾರ್ಯಕ್ರಮಗಳ ಜಾರಿಯ ವಿಧಾನವನ್ನು ಮತ್ತು ಅಂತಹ ಕಾರ್ಯಕ್ರಮಗಳ ಫಲಾನುಭವಿಗಳ ವಿವರ**

– ಈ ಕಛೇರಿಗೆ ಅನ್ವಯಿಸುವುದಿಲ್ಲ

**XIII ನೀಡಿರುವ ರಿಯಾಯತಿಗಳನ್ನು ಅನುಮತಿ ಪತ್ರಗಳನ್ನು ಅಥವಾ ಅಧಿಕಾರ ಪತ್ರಗಳನ್ನು ಪಡೆಯುವವರ ವಿವರ**

– ಈ ಕಛೇರಿಗೆ ಅನ್ವಯಿಸುವುದಿಲ್ಲ

**XIV ಕಛೇರಿಯ ಬಳಿ ಲಭ್ಯವಿರುವ ಅಥವಾ ಅದು ಹೊಂದಿರುವ ವಿದ್ಯುನ್ಮಾನ ರೂಪಕ್ಕೆ ಪರಿವರ್ತಿಸಿರುವ, ಮಾಹಿತಿಗೆ ಸಂಬಂಧಿಸಿದ ವಿವರ**

– ವಿದ್ಯುತ್ ಗುತ್ತಿಗೆದಾರರ ಅರ್ಜಿಗಳ ವಿಲೇವಾರಿಯನ್ನು ವಿದ್ಯುದ್ದೀಕರಣಗೊಳಿಸಿದ್ದು ಇತರ ವಿಭಾಗಗಳ ಕೆಲಸ ಪ್ರಗತಿಯಲ್ಲಿದೆ.

**XV** ಸಾರ್ವಜನಿಕ ಉಪಯೋಗಕ್ಕಾಗಿ ಗ್ರಂಥಾಲಯವನ್ನು ಅಥವಾ ವಾಚನಾಲಯವನ್ನು ನಿರ್ವಹಿಸುತ್ತಿದ್ದಲ್ಲಿ ಅದರ ಕೆಲಸದ ಸಮಯವನ್ನೊಳಗೊಂಡ ಮಾಹಿತಿ ಪಡೆಯಲು ಸಾರ್ವಜನಿಕರಿಗೆ ಲಭ್ಯವಿರುವ ಸೌಲಭ್ಯಗಳ ವಿವರ.

- ಈ ಕಛೇರಿಯಲ್ಲಿ ಲಭ್ಯವಿರುವ ಯಾವುದೇ ಮಾಹಿತಿಯನ್ನು ಕಚೇರಿ ಕೆಲಸ ನಿರ್ವಹಿಸುವ ಸಮಯದಲ್ಲಿ ಪಡೆಯಬಹುದಾಗಿದೆ.

**XVI.** ಸಾರ್ವಜನಿಕ ಮಾಹಿತಿ ಅಧಿಕಾರಿಗಳ ಹೆಸರುಗಳು, ಪದನಾಮಗಳು ಮತ್ತು ಇತರ ವಿವರನಿಯಮಿಸಬಹುದಾದಂತಹ ಇತರ ಮಾಹಿತಿಯನ್ನು ಪ್ರಕಟಿಸತಕ್ಕದ್ದು ಮತ್ತು ಆ ತರುವಾಯ ಪ್ರತಿ ವರ್ಷ ಈ ಪ್ರಕಟಣೆಗಳನ್ನು ಅಂದಿನವರೆಗೆ ಪರಿಷ್ಕರಿಸತಕ್ಕದ್ದು

| ಕ್ರಮ ಸಂಖ್ಯೆ | ಅಧಿಕಾರಿಗಳ ಹೆಸರು | ಅಧಿಕಾರಿಗಳ ಪದನಾಮ | ಮಾಹಿತಿ ಹಕ್ಕು 2005 ರ ಪ್ರಕಾರ ಹುದ್ದೆ | ದೂರವಾಣಿ | ಮೊದಲ ಮೆಲ್ಮನವಿ ಅಧಿಕಾರಿ |
|---|---|---|---|---|---|
| 1 | ಎಲ್.ಮೇಘನಾಯ್ಕ್ | ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಉತ್ತರ | ಸಾರ್ವಜನಿಕ ಮಾಹಿತಿ ಅಧಿಕಾರಿ (ಅವರ ಕಾರ್ಯ ವ್ಯಾಪ್ತಿ ಮತ್ತು ಅಧಿಕಾರ ಪ್ರತ್ಯಾಯೋಜನೆ ಪ್ರಕಾರ) | 080–23420056 | ಡಿ.ಎಲ್.ನಾಗರಾಜು ಅಪರ ಮುಖ್ಯ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಉತ್ತರ |
| 2 | ಶ್ರೀಮತಿ ಬಿ.ಎಸ್. ಮುಕ್ತಾಂಬ | ಉಪ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಉತ್ತರ | ಸಾರ್ವಜನಿಕ ಮಾಹಿತಿ ಅಧಿಕಾರಿ (ಅವರ ಕಾರ್ಯ ವ್ಯಾಪ್ತಿ ಮತ್ತು ಅಧಿಕಾರ ಪ್ರತ್ಯಾಯೋಜನೆ ಪ್ರಕಾರ | 080–23420022 | |
| 3 | ಕು.ವಿನುತಲಕ್ಷ್ಮಿ | ಸಹಾಯಕ ವಿದ್ಯುತ್ ಪರಿವೀಕ್ಷಕರು–1 (ಕಛೇರಿ) | ಸಾರ್ವಜನಿಕ ಮಾಹಿತಿಅಧಿಕಾರಿ(ಅಪರ ಮುಖ್ಯ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಉತ್ತರ ವಲಯದ ತಾಂತ್ರಿಕ ಮಾಹಿತಿ). | 080–23420022 | |
| 4 | ಕು.ವಿನುತಲಕ್ಷ್ಮಿ | ಸಹಾಯಕ ವಿದ್ಯುತ್ ಪರಿವೀಕ್ಷಕರು–2 (ಕಛೇರಿ) | ಸಾರ್ವಜನಿಕ ಮಾಹಿತಿ ಅಧಿಕಾರಿ, (ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಉತ್ತರ ವೃತ್ತಕ್ಕೆ ತಾಂತ್ರಿಕ ಮಾಹಿತಿ). | 080–23420022 | |
| 5 | ಶ್ರೀಮತಿ ನಾಗರತ್ನ (ಪ್ರಭಾರ) | ಲೆಕ್ಕಾಧಿಕಾರಿಗಳು | ಸಾರ್ವಜನಿಕ ಮಾಹಿತಿ ಅಧಿಕಾರಿ (ತೆರಿಗೆ, ಆಡಳಿತತ್ಮಾಕ ಮತ್ತು ಇತರೆ ಮಾಹಿತಿಗಾಗಿ | 080–23420022 | |
| 6 | ರವೀಶ್ ಎಂ.ಪಿ. | ಸವಿಪ (ಕ್ಷೇತ್ರಿಯ)–1 | ಸಹಾಯಕ ಸಾರ್ವಜನಿಕ | 080– | |

| | | | | | |
|---|---|---|---|---|---|
| | | ಮತ್ತು 3 | ಮಾಹಿತಿ ಅಧಿಕಾರಿ, (ತಮ್ಮ ಕಾರ್ಯವ್ಯಾಪ್ತಿಯಲ್ಲಿ) | 23420022 | |
| 7 | ದ್ರುವಕುಮಾರ್ ಎಂ | ಸವಿಪ (ಕ್ಷೇತ್ರಿಯ)–2 | ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ, (ತಮ್ಮ ಕಾರ್ಯವ್ಯಾಪ್ತಿಯಲ್ಲಿ) | 080–23420022 | |
| 8 | ಶ್ರೀಮತಿ ನಾಗರತ್ನ | ವ್ಯವಸ್ಥಾಪಕರು | ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ, (ವಿದ್ಯುತ್ ತೆರಿಗೆ ವಿಭಾಗಕ್ಕೆ ಸಂಬಂಧಿಸಿದಂತೆ) | 080–23420022 | |
| 9 | ಶ್ರೀ ರವಿಕುಮಾರ್ ಎನ್ | ಅಧೀಕ್ಷಕರು | ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ, ಆಡಳಿತ ವಿಭಾಗಕ್ಕೆ ಸಂಬಂಧಿಸಿದಂತೆ) | 080–23420022 | |

**XVII. ಸಾರ್ವಜನಿಕರಿಗೆ ಸಂಬಂಧಿಸಿದ ಪ್ರಮುಖ ಕಾರ್ಯ ನೀತಿಗಳನ್ನು ರೂಪಿಸುವಾಗ ಅಥವಾ ನಿರ್ಧಾರಗಳನ್ನು ಘೋಷಿಸುವಾಗ ಎಲ್ಲಾ ಸುಸಂಗತ ಸಂಗತಿಗಳನ್ನು ಪ್ರಕಟಿಸತಕ್ಕದ್ದು, ಆಡಳಿತಾತ್ಮಕ ಅಥವಾ ಅರೆನ್ಯಾಯಿಕ ಸ್ವರೂಪದ ನಿರ್ಣಯಗಳಿಂದ ಬಾಧಿತರಾದ ವ್ಯಕ್ತಿಗಳಿಗೆ ಅದರ ಕಾರಣಗಳನ್ನು ಒದಗಿಸತಕ್ಕದ್ದು.**

– ಮಾಹಿತಿ ಹಕ್ಕು ಅಧಿನಿಯಮದ ಪ್ರಕಾರ ಪ್ರತಿ ವರ್ಷ ಪ್ರಕಟಿಸಲಾಗುವುದು.

ಅಪರ ಮುಖ್ಯ ವಿದ್ಯುತ್ ಪರಿವೀಕ್ಷಕರು,
(ಪ್ರಭಾರ)ಬೆಂಗಳೂರು ಉತ್ತರ ಬೆಂಗಳೂರು.

Additional Chief Electrical Inspector
Bangalore North,
BANGALORE

ಪತ್ರ ಸಂ: ಅಮುವಿಪ/ಬೆಂ.ಉ/ಮಾ.ಹ.ಅ./ 5214-34 /19–20, ದಿನಾಂಕ: 18/02/2019

ಪ್ರತಿಗಳನ್ನು:

1) ಅಪರ ಮುಖ್ಯ ಕಾರ್ಯದರ್ಶಿಗಳು, ಇಂಧನ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರುರವರ ಅವಗಾಹನೆಗಾಗಿ ಸಲ್ಲಿಸಲಾಗಿದೆ.
2) ಮುಖ್ಯ ವಿದ್ಯುತ್ ಪರಿವೀಕ್ಷಕರು, ಕರ್ನಾಟಕ ಸರ್ಕಾರ, ಬೆಂಗಳೂರುರವರ ಅವಗಾಹನೆಗಾಗಿ ಸಲಿಸಲಾಗಿದೆ.

ಪ್ರತಿಯನ್ನು ಮಾಹಿತಿಗಾಗಿ

3) ಈ ವಲಯದ ಎಲ್ಲಾ ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರುಗಳಿಗೆ,
4) ಈ ವಲಯದ ಎಲ್ಲಾ ವಿದ್ಯುತ್ ಪರಿವೀಕ್ಷಕರುಗಳಿಗೆ,
5) ಈ ವಲಯದ ಎಲ್ಲಾ ಉಪ ವಿದ್ಯುತ್ ಪರಿವೀಕ್ಷಕರುಗಳಿಗೆ,
6) ಕ.ಕ/ಪ್ರ.ಕ/ನಾಮ ಫಲಕಕ